ಗೀತಾ ಪ್ರವಚನ ಮತ್ತು ಸರ್ವೋದಯ

ಲೇಖಕರು :
ಜಿ. ವಿ. ನಾರಾಯಣಮೂರ್ತಿ

ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ
ವಲ್ಲಭ ನಿಕೇತನ, ಕುಮಾರಾ ಪಾರ್ಕ್ (ಪೂರ್ವ)
ಬೆಂಗಳೂರು–560 001

ಗೀತಾ ಪ್ರವಚನ ಮತ್ತು ಸರ್ವೋದಯ

ಲೇಖಕರು :

ಜಿ. ವಿ. ನಾರಾಯಣಮೂರ್ತಿ

ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ
ವಲ್ಲಭ ನಿಕೇತನ, ಕುಮಾರಾ ಪಾರ್ಕ್ (ಪೂರ್ವ)
ಬೆಂಗಳೂರು–560 001

ಪರಿವಿಡಿ

೧. ಶ್ರೀಮದ್‌ಭಗವದ್‌ಗೀತೆ-ಗೀತಾಪ್ರವಚನ

ಗೀತೆಯ ಮಹಾತ್ಮೆ

ಭರತಖಂಡದ ಹಿಂದೂ ಜನಕ್ಕೆ ಮೂರು ಪವಿತ್ರ ಗ್ರಂಥಗಳಿವೆ; ವೇದೋಪನಿಷತ್ತುಗಳು, ಬ್ರಹ್ಮಸೂತ್ರಗಳು, ಮತ್ತು ಶ್ರೀಮದ್ಭಗವದ್ಗೀತಾ. ಇವುಗಳಲ್ಲಿ ವೇದೋಪನಿಷತ್ತುಗಳು ಮಾನವನನ್ನೊಳಗೊಂಡ ಸೃಷ್ಟಿಯ, ಸೃಷ್ಟಿಕರ್ತನ ಮೂಲವನ್ನರಿಯಲು, ಶಾಶ್ವತ ಸತ್ಯವನ್ನರಿಯಲು ಋಷಿ ಮುನಿಗಳು ಸ್ಫೂರ್ತಿಯಿಂದ ಕೂಡಿ ಉಲ್ಲೇಖಿಸಿದವು. ಬ್ರಹ್ಮಸೂತ್ರಗಳು ಸೃಷ್ಟಿಕರ್ತನ ವಿಷಯದಲ್ಲಿ ಋಷಿಮುನಿಗಳು ಕಂಡುಹಿಡಿದ ಅಚ್ಚುಮೆಚ್ಚಿನ ವಾಕ್ಯಗಳು. ಈ ಎರಡೂ ಗ್ರಂಥರಾಶಿ ಸಾಮಾನ್ಯರಿಗೆ ಕಠಿಣ. ಪಂಡಿತರಿಗೆ ಮಾತ್ರ ವೇದ್ಯವಾಗತಕ್ಕವು. ಮೂರನೆಯದಾದ ಭಗವದ್ಗೀತೆಯೋ ಅದರ ಹೆಸರಿಗೆ ತಕ್ಕಂತೆ ಒಂದು ಸುಂದರಗೀತೆ. ಅಭ್ಯಸಿಸಲು, ಹಾಡಲು ಮನೋಹರ ವಾದ ಕಾವ್ಯ. ಒಂದೇ ಮಾತಿನಲ್ಲಿ ಹೇಳಬೇಕಾದರೆ, ಹಿಂದೂ ಧರ್ಮ ವೆಂದರೇನು ? ಅದರ ಪ್ರಮುಖ ಪ್ರಮೇಯಗಳು ಯಾವುವು ? ಜೀವ, ಜಗತ್ತು, ಈಶ್ವರ ಇವುಗಳ ಸ್ಪಷ್ಟ ನಿರೂಪಣೆಯನ್ನು ಹೇಗೆ ಅರಿಯ ಬಹುದು ? ಇವೆಲ್ಲವುಗಳನ್ನೂ ಭಗವದ್ಗೀತೆ ಸುಲಭದಲ್ಲಿ ಸಂಗ್ರಹಿಸುತ್ತದೆ. ಆದುದರಿಂದಲೇ ಅದರ ಮಹಾತ್ಮೆ ಅನ್ಯಾದೃಶ.

ಈ ಸುಂದರ ಗೀತೆ ಯಾರೋ ಸಾಮಾನ್ಯ ಮನುಷ್ಯ ಹೇಳಿದುದಲ್ಲ. ಅವನು ಅಸಾಮಾನ್ಯ ಪುರುಷ, ಪರಮ ಪುರುಷ, ಪರಮಾತ್ಮನ ಅವತಾರವೇ ಎಂದು ಹೇಳಿಸಿಕೊಂಡ ಭಗವಂತನ ಮಾತು. ದ್ವಾಪರಯುಗದಲ್ಲಿ ಲೀಲಾ ವತಾರಿ ಪುರುಷ ಎನ್ನಿಸಿಕೊಂಡ ಶ್ರೀಕೃಷ್ಣನೇ ಇದರ ಮೂಲಪುರುಷ.

ಭಗವದ್ಗೀತೆ ಶತಮಾನಗಳಿಂದ ನಮ್ಮ ರಾಷ್ಟ್ರೀಯ ಮತ್ತು ವೈಯಕ್ತಿಕ ಜೀವನವನ್ನು ರೂಪಿಸುತ್ತ ಬಂದಿದೆ. ಶ್ರೀಕೃಷ್ಣ ತನ್ನ ಕಾಲದಲ್ಲಿ ಅನ್ಯಾಯ, ದಬ್ಬಾಳಿಕೆಗಳ ವಿರುದ್ಧ ಹೋರಾಡಿ ಧರ್ಮಕ್ಕೆ ಜಯ ದೊರಕಿಸಿಕೊಟ್ಟವನು. ಅವನಿಗೂ ಧರ್ಮಪುರುಷ ಎಂದೇ ಹೆಸರು.

ಗೀತೆಗೆ ಅಸಂಖ್ಯ ವ್ಯಾಖ್ಯಾನಗಳು ಬಂದಿವೆ. ಪ್ರಾಚೀನ ಕಾಲದಲ್ಲಿ ಮಧ್ಯಮಯುಗದಲ್ಲಿ, ಅರ್ವಾಚೀನ ಕಾಲದಲ್ಲಿ-ಹೀಗೆ ಎಲ್ಲ ಕಾಲಗಳಲ್ಲಿಯೂ ಅದರ ಪ್ರಭಾವ ಕಂಡು ಬಂದಿದೆ. ಅರ್ವಾಚೀನಕಾಲದಲ್ಲಿ ಭಾರತೀಯರ ನೇಕರೂ, ಮತ್ತು ಪಾಶ್ಚಾತ್ಯ ಮನೀಷಿಗಳೂ ತಾವು ಕಂಡಂತೆ ವ್ಯಾಖ್ಯಾನ ಬರೆದಿದ್ದಾರೆ. ಬ್ರಿಟಿಷರೊಂದಿಗೆ ನಮ್ಮ ಹೋರಾಟ ಸಾಗಿದಾಗ ಗೀತೆ ನೀಡಿದ ಧೈರ್ಯ-ಸ್ಥೈರ್ಯಗಳು ಅದ್ಭುತ. ಅರವಿಂದರು ತಮ್ಮ ಪಾಂಡಿತ್ಯ ಸರ್ವಸ್ವ ವನ್ನು ಧಾರೆ ಎರೆದಿದ್ದಾರೆ. ಲೋಕಮಾನ್ಯ ಬಾಲ ಗಂಗಾಧರ ತಿಲಕರು ತಮ್ಮ ಜೀವನದ ದಿಕ್ಸೂಚಿಯನ್ನಾಗಿ ಮಾಡಿಕೊಂಡರು. ಮಹಾತ್ಮ ಗಾಂಧಿ ಯಂತೂ "ಗೀತಾ ಮಾತೆ" ಎಂದೇ ಕರೆದರು. ಇವುಗಳ ಪಂಕ್ತಿಯಲ್ಲಿ ಸೇರುವಂಥ ಗ್ರಂಥ ವಿನೋಬಾಜಿಯವರ "ಗೀತಾ ಪ್ರವಚನ". ಅದಕ್ಕೆ ಒಂದು ವೈಶಿಷ್ಟ್ಯವಿದೆ. ಅದು ಸರಳದಲ್ಲಿ ಸರಳ. ಸಾಮಾನ್ಯಮಂದಿಗೆ ಸುಲಭವಾಗಿ ಓದಿಕೊಂಡು, ಅರ್ಥ ಮಾಡಿಕೊಂಡು ಜೀರ್ಣಿಸಿಕೊಳ್ಳುವಂಥ ಗ್ರಂಥ. ಇದರಲ್ಲಿ ಪಾಂಡಿತ್ಯದ ಅತಿರೇಕವಿಲ್ಲ. ವಿಚಾರ ನಿರೂಪಣೆಯ ಕ್ಲಿಷ್ಟತೆ ಇಲ್ಲ. ಎಲ್ಲವೂ ಸುಲಿದ ಬಾಳೆಯ ಹಣ್ಣಿನಂತೆ ಮೆಲ್ಲಲು ಯೋಗ್ಯ, ಸಿದ್ಧ.

ಗೀತಾ ಪ್ರವಚನದ ಎರಡನೆಯ ಆವೃತ್ತಿಗೆ 'ಎರಡು ಮಾತು' ಬರೆಯುತ್ತಾ ವಿನೋಬಾ ಸ್ವತಃ ಹೀಗೆ ಹೇಳಿದ್ದಾರೆ: "ಬಾಳಿನ ಸಂಬಂಧ ವಿಲ್ಲದ ಯಾವ ವಿಚಾರವೂ ವಾದವೂ ಇದರಲ್ಲಿಲ್ಲ. ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಇರುವ ಕೂಲಿಕಾರ, ಕೃಷಿಕರಿಗೆ ಕೂಡ ಇದರಿಂದ ಸಾಂತ್ವನ, ಶ್ರಮ ಪರಿಹಾರ ಆದೀತು ಎಂಬ ವಿಶ್ವಾಸ ನನಗಿದೆ."

ನ್ಯೂಯಾರ್ಕ್ ನಗರದ ರಾಮಕೃಷ್ಣಾಶ್ರಮದ ಅಧ್ಯಕ್ಷ ಸ್ವಾಮಿ ಪ್ರಭವಾನಂದ ಮತ್ತು ಕ್ರಿಸ್ಟೋಫರ್ ಇಷರ್‌ವುಡ್ ಎಂಬುವವರು ಜೊತೆ ಸೇರಿ ಗೀತೆಯನ್ನು ಆಂಗ್ಲ ಭಾಷೆಗೆ ಅನುವಾದಿಸಿದ್ದಾರೆ. ಅದೊಂದು ಶ್ರೇಷ್ಠ ಗ್ರಂಥ. ಅದಕ್ಕೆ ಈ ಯುಗದ ಮನೀಷಿಗಳಲ್ಲಿ ಒಬ್ಬರೆಂದು ಹೆಸರಾಂತ

ಆಲ್ಡಸ್ ಹಕ್ಸ್ಲೀ ಎಂಬುವವರು ಒಂದು ಮನೋಜ್ಞ ಮುನ್ನುಡಿ ಬರೆದಿದ್ದಾರೆ. ಅದರಲ್ಲಿ ಹೀಗೆ ಹೇಳುತ್ತಾರೆ : "ಗೀತಾ ಗ್ರಂಥದಲ್ಲಿ ಬರುವ ಅಂಕಿತನಾಮಗಳನ್ನು ತೆಗೆದು ಓದಿಕೊಂಡರೆ ಅದು ಒಂದು ವಿಶ್ವಮಾನ್ಯ ಗ್ರಂಥ ವೆನಿಸುತ್ತದೆ. ಅದರಲ್ಲಿ ಬರುವ ಕೆಲವು ಪಾರಿಭಾಷಿಕ ಪದಗಳ ಅರ್ಥವನ್ನು ತಿಳಿದುಕೊಂಡರೆ ಅದೊಂದು ಸರ್ವರಿಗೂ ಒಪ್ಪಿಗೆಯಾಗತಕ್ಕ ಆದರಣೀಯ ವಾಗುವಂಥ ಗ್ರಂಥವೆನಿಸಿಕೊಳ್ಳಲು ಯಾವ ಅಡ್ಡಿಯೂ ಕಾಣದು."

ಹದಿನೆಂಟು ಅಧ್ಯಾಯಗಳಲ್ಲಿ 701 ಶ್ಲೋಕಗಳಲ್ಲಿ ಗೀತೆ ಹರಡಿದೆ. ಇದರಲ್ಲಿ ಅನೇಕ ವಿಷಯಗಳು ಪರಸ್ಪರ ಪುನರಾವರ್ತನೆಯಾಗುವಂತೆ ಕಂಡು ಬಂದರೂ ಒಂದು ವಿಚಾರದ ಏಕತೆಯಿದೆ. ಶಂಕೆಗಳಿಗೆ ಉತ್ತರರೂಪವಾಗಿ ವಿವರಣೆ ಬರೆದಿದ್ದರೆ ಬಹುಶಃ ಎರಡನೇ ಅಧ್ಯಾಯಕ್ಕೇ ಕೊನೆಗಾಣುತ್ತಿತ್ತೋ ಏನೋ; ಅಷ್ಟರಲ್ಲಿ ಜೀವನದ ಸಿದ್ಧಾಂತ, ಜೀವನ ಅನುಸರಣೆಯ ಮಾರ್ಗ ಅನುಮಾನಕ್ಕೆ ಎಡೆಯಿಲ್ಲದಂತೆ ಬೋಧಿಸಲ್ಪಟ್ಟಿದೆ. ಅರ್ಜುನ ಸಕಲ ಮಾನವ ಪ್ರತಿನಿಧಿ. ಸರ್ವಕಾಲದಲ್ಲಿಯೂ ಮೋಹಕ್ಕೆ, ಹೃದಯ ಮಂಥನಕ್ಕೆ, ತಳಮಳಕ್ಕೆ ಸಿಕ್ಕಿರುವ ವ್ಯಕ್ತಿಯ ಪ್ರತಿಬಿಂಬ. ಶ್ರೀ ಕೃಷ್ಣನೋ ಅದೇ ಹೃದಯದಲ್ಲಿ ಅಡಗಿರುವ ಒಳವಾಣಿ, ಪ್ರೇರಕವಾಣಿ, ಚೇತನದಾಯಕ ಶಕ್ತಿ, ಪರಸ್ಪರ ವಿರುದ್ಧ ಭಾವನೆಗಳು ಸಂಘರ್ಷಕ್ಕೆ, ಪರಸ್ಪರ ತುಮುಲಕ್ಕೆ ನಿಂತಾಗ ದಾರಿ ಕಾಣದೆ ಹಂಬಲಿಸುವ ಮನುಜ ಮಾತ್ರನಿಗೆ ತ್ರಾಣನೀಡಿ ಪ್ರಾಣತುಂಬಿ ಉತ್ತಾರಣೆಯ ಮಾರ್ಗವನ್ನು ತೋರಿಸುವ ಶುದ್ಧ ಸತ್ವ.

ಯುಗಯುಗಗಳಲ್ಲಿಯೂ ವ್ಯಕ್ತಿವ್ಯಕ್ತಿಗಳಲ್ಲಿಯೂ ರಾಷ್ಟ್ರರಾಷ್ಟ್ರ ಗಳಲ್ಲಿಯೂ ಇಂಥದೊಂದು ಸಂಕಟ ಸಮಯ, ಆಪತ್ತಿನ ಸಮಯ ಬಂದೇ ಬರುತ್ತದೆ. ಆ ಸಮಯದಲ್ಲಿ ಯಾವುದು ದಾರಿ ತೋರುವುದೋ, ಸಂಕಟ ವನ್ನು ಹರಿಸುವುದೋ, ಅದೇ ಭಗವಂತನ ಶಕ್ತಿ. ಶ್ರೀ ಕೃಷ್ಣನ ಆಪ್ತವಾಣಿ. ಇದು ವೀರಕರ್ಮಗಳನ್ನು ಮಾಡಿಸಬಹುದು, ಶರಣನನ್ನಾಗಿ ಮಾಡ ಬಹುದು. ಯಾವುದಾದರೂ ಜಗತ್ತಿಗೊಂದು ಹರ್ಷ ಜನಿಸುತ್ತದೆ. ಮನ ಮುದಗೊಳಿಸುವ ಗಾಳಿ ಬೀಸಿ ಜಗತ್ತು ಬಾಳ್ವೆಗೆ ಸಿದ್ಧವಾಗುತ್ತದೆ, ಬದುಕಿಗೆ ಅಣಿಯಾಗುತ್ತದೆ. ಜೀವ ಅವ್ಯಾಹತವಾಗಿ ಮುಂದೆ ಮುಂದೆ ಓಡುತ್ತದೆ. ಇದು ಗೀತೆಯ ಫಲ. ಅಂತರಂಗದ ಮಂಗಳಮಯ ಧ್ವನಿಯ ಮರುಕಳಿಕೆ; ಪ್ರತಿಧ್ವನಿ.

ಗೀತಾ ಪ್ರವಚನವೂ ಇಂಥ ಸನ್ನಿವೇಶದಲ್ಲಿಯೇ ಜನನ ಹೊಂದಿತು. ಗೀತೆ ಕುರುಕ್ಷೇತ್ರದ ರಣಾಂಗಣದಲ್ಲಿ ಉಗಮವಾದಂತೆ ಗೀತಾ ಪ್ರವಚನವೂ ಪ್ರತ್ಯಕ್ಷ ಕರ್ಮಕ್ಷೇತ್ರದಲ್ಲೇ ಪ್ರಕಟಗೊಂಡಿದೆ, ಅಲ್ಲಿ ಅರ್ಜುನನಂಥ ಋಜು ಸ್ವಭಾವದ ಶಿಷ್ಯ ಶ್ರೇಷ್ಠನಿದ್ದ. ಗೀತಾಪ್ರವಚನ ಕೇಳಲು ಜಮುನಾಲಾಲರಂಥ ಸಾಧಕ ಶ್ರೇಷ್ಠರು ಇದ್ದರು. ಭಗವಂತ ಶ್ರೀಕೃಷ್ಣ ಸ್ಫೂರ್ತಿದುಂಬಿ ಉಪದೇಶಿಸಿದರೆ, ವಿನೋಬಾ ಜ್ಞಾನಗಂಗೆಯಂತೆ ಪ್ರವಚನ ಹರಿಸಿದ್ದಾರೆ.

ಭಗವದ್ಗೀತೆಯ ಪ್ರಮೇಯಗಳು

ಭಗವದ್ಗೀತೆಯಲ್ಲಿ ಪ್ರಸ್ತಾಪವಾದ ಪ್ರಮೇಯಗಳು ಪ್ರಾಯಶಃ ಹಿಂದೂಧರ್ಮದಲ್ಲಿನ ಎಲ್ಲ ಪ್ರಮೇಯಗಳು. ಧರ್ಮ, ಸ್ವಧರ್ಮ, ಕರ್ಮ, ಭಕ್ತಿ, ಜ್ಞಾನ, ಯೋಗ, ಧ್ಯಾನ, ಜೀವ, ಜಗತ್ತು, ಈಶ್ವರ, ತ್ರಿಗುಣಗಳು, ಗುಣಾತೀತಸ್ಥಿತಿ, ಒಳಿತು–ಕೆಟ್ಟುದು, ತ್ಯಾಗ, ಸನ್ಯಾಸ, ಮೋಕ್ಷ, ವರ್ಣಾಶ್ರಮ, ಅಧ್ಯಾತ್ಮ ಇತ್ಯಾದಿ ಅನೇಕ ಅಂಶಗಳು ಬರುತ್ತವೆ. ಇವೆಲ್ಲ ಜಿಜ್ಞಾಸೆಯ ವಿಚಾರಗಳು. ಗೀತಾ ಪ್ರವಚನದಲ್ಲೂ ಇವುಗಳೇ ಚಿಂತನೆಯ ವಿಷಯವಾದರೂ, ಇದರಲ್ಲಿ ಪ್ರಾಚೀನ ಮತ್ತು ಆಧುನಿಕ ದೃಷ್ಟಿ ಸಮನ್ವಿತ ರೀತಿಯಲ್ಲಿ ಎದ್ದು ಕಾಣುತ್ತದೆ. ನಮ್ಮ ಕಾಲ ವಿಜ್ಞಾನದ ಕಾಲ. ಇಂದು ವಿಚಾರವೇ ಪ್ರಧಾನ. ಮೂಢಭಾವನೆಗಾಗಲೀ, ಅಂಧಶ್ರದ್ಧೆಗಾಗಲೀ ಸ್ಥಾನ ವಿಲ್ಲ. ಭಾವ ಬುದ್ಧಿಗಳೆರಡೂ ಒಂದು ಮತ್ತೊಂದರಲ್ಲಿ ಓತಪ್ರೋತ. ಗೀತೆ ಜೀವನಧರ್ಮಯೋಗವೆನಿಸಿದರೆ, ಗೀತಾಪ್ರವಚನ ಮಾನವ ಜೀವನ ಯಾತ್ರೆಯಲ್ಲಿ ನೆರವಾಗುವ ಸುಂದರ ಕೈಪಿಡಿ.

೨. [ಅ] ಗೀತಾ ಪ್ರವಚನದ ಪರಿಚಯ

ಗೀತಾ ಪ್ರವಚನದ ಬಾಹ್ಯ ವಿವೇಚನೆ

ಎಲ್ಲಿ ಬುದ್ಧಿ ಶುದ್ಧವೋ, ಭಾವ ಉನ್ನತವೋ, ಮನಸ್ಸು ವಿಚಾರ ಪರವೋ,

ಅಲ್ಲಿ ಸ್ವಾತಂತ್ರ್ಯವಿದೆ, ಆನಂದವಿದೆ, ಸೌಂದರ್ಯವಿದೆ, ಅದು ಸ್ವಚ್ಛಂದ ಸ್ಥಿತಿ. ಯಾವ ಮನುಷ್ಯ ಅಂಥ ಮಹಾನುಭಾವನೋ ಅವನಿಗೆ ಯಾವ ಹಿಂಸೆಯೂ ಹಿಂಸೆಯಲ್ಲ, ಬಂಧನವೂ ಬಂಧನವಲ್ಲ, ಅವನು ಮುಕ್ತವಿಚಾರಿ. ಅವನಿಗೆ ಯಾವ ಶಿಕ್ಷೆಯೂ ಶಿಕ್ಷೆಯೆನಿಸದು. ಜಗತ್ತಿನಲ್ಲಿ ಅಂಥ ಅನೇಕ ಮಂದಿ ಆಗಿ ಹೋಗಿದಾರೆ. ಮುಂದೆ ಎಷ್ಟುಜನ ಅಂಥವರು ಬಂದಾರೋ! ಅಂಥವರಿಗೆ ಶಿಕ್ಷೆ ವಿಧಿಸಲು ಸೆರೆಮನೆಗೆ ದೂಡಿದರೆ, ಅವರ ಚೇತನ ಪುಟಗೊಳ್ಳುತ್ತದೆ, ಉಜ್ವಲವಾಗುತ್ತದೆ.

ಸೆರೆಮನೆಯ ಕೃತಿಗಳು:-

ಸ್ಪೇನಿನ ಸರ್‌ವೆಂಟಿಸ್ ಎಂಬುವವನನ್ನು ಸೆರೆಮನೆಗೆ ಹಾಕಿದರು. ಅವನ ಚೇತನ ಮುದುಡಿಕೊಳ್ಳಲಿಲ್ಲ; ಜಗತ್ಪ್ರಸಿದ್ಧವಾದ ಡಾನ್ ಕ್ವಿಕ್ಸೋಟ್ ಕಥೆ ಬರೆದ. ಲೋಕಮಾನ್ಯ ತಿಲಕರನ್ನು ಆಂಗ್ಲ ಆಡಳಿತಗಾರರು ಸೆರೆಮನೆಯಲ್ಲಿಟ್ಟರು. ಅವರು ಕರ್ಮಯೋಗ ಶಾಸ್ತ್ರವೆಂಬ ಹೆಸರಿನಲ್ಲಿ 'ಗೀತಾರಹಸ್ಯ'ವನ್ನು ಬರೆದರು. ಅಂತೆಯೇ ವಿನೋಬಾ ಗಾಂಧಿ ನಾಯಕತ್ವದ 'ಶಾಸನೋಲ್ಲಂಘನ' ಚಳವಳಿಯಲ್ಲಿ ಭಾಗವಹಿಸಿ ಸೆರೆಮನೆ ಸೇರಿದರು ; 1931 ರಲ್ಲಿ ಮತ್ತು 1932 ರಲ್ಲಿ, ಈ ಎರಡು ಸಲವೂ ಅವರಿಂದ ಅಮೋಘ ಕೃತಿಗಳು ಹೊರಬಂದವು. 'ಗೀತಾಯಿ' (ಗೀತಾತಾಯಿ) ಮತ್ತು ಗೀತಾ ಪ್ರವಚನ ಇವೇ ಆ ಕೃತಿಗಳು.

ಗೀತಾಯಿ ಜನನ:-

ತಾಯಿ ಬದುಕಿದ್ದಾಗ ಅವರ ಒಂದು ಇಚ್ಛೆಯನ್ನು ವಿನೋಬಾಗೆ ಪೂರೈಸಲು ಸಾಧ್ಯವಾಗಿರಲಿಲ್ಲ. ಸಂಸ್ಕೃತವನ್ನು ಅರಿಯದ ಆಕೆ ಮರಾಠಿ ಭಾಷೆಯಲ್ಲೇ ಗೀತೆಯನ್ನು ಏಕೆ ಬರೆಯಬಾರದು ? ಎಂದು ಮಗನನ್ನು ಕೇಳಿದ್ದರು. ಅದು 1931 ರಲ್ಲಿ ಸೆರೆಮನೆಗೆ ಹೋದಾಗ ರೂಪ ಪಡೆಯಿತು. ನಾಲ್ಕು ತಿಂಗಳು ಸೆರೆವಾಸದಲ್ಲಿ ಅದನ್ನು ಮೂಲದಂತೆಯೇ ಕಾವ್ಯರೂಪದಲ್ಲಿ ಬರೆದರು. ಅದು ಹಾಡಲು ಬಹು ರಮ್ಯವಾಗಿದೆ. ಅದು 'ಗೀತಾಯಿ' ಎಂಬ ಅಭಿದಾನ ಪಡೆಯಿತು. ತಾಯಿಗೆ ಪ್ರೀತ್ಯರ್ಥ ಈ ಕೃತಿ. ಇದನ್ನು ಸೀತಾರಾಂ

ಶರಣಗುಪ್ತ ಎನ್ನುವವರು ಹಿಂದಿಗೂ, ಕಿಶೋರಲಾಲ್ ಭಾಯಿ ಗುಜರಾತಿಗೂ ಅನುವಾದ ಮಾಡಿದ್ದಾರೆ. ಗೀತಾಯಿ ಮಹಾರಾಷ್ಟ್ರದ ಮನೆಮನೆಗಳಲ್ಲೂ ಗುಣಿಗುಣಿಸುತ್ತದೆ. ಅದು ಅಷ್ಟು ಜನ ಮನ ರಂಜಿಸಿ, ಆತ್ಮತೋಷ ತಂದು ಕೊಟ್ಟಿದೆ.

ಗೀತಾ ಪ್ರವಚನ

1932 ರಲ್ಲಿ ಅವರು ಮತ್ತೆ ಸೆರೆಮನೆ ಸೇರಿದರು. ಆಗ ಆರು ತಿಂಗಳು ಸೆರೆಮನೆವಾಸ ಧುಳೇ ಜೈಲಿನಲ್ಲಿದ್ದರು. ಅವರೊಂದಿಗೆ ಅನೇಕ ಗೌರವಾನ್ವಿತ ವ್ಯಕ್ತಿಗಳು ಇದ್ದರು. ಅವರೆಲ್ಲ ಸೇರಿ 'ಗೀತೆಯ ಮೇಲೆ ಪ್ರವಚನ ಮಾಡಿ' ಎಂದು ಕೇಳಿಕೊಂಡರು. ಪ್ರತಿ ಭಾನುವಾರ ವಿನೋಬಾ ಪ್ರವಚನವಿತ್ತರು. 1932 ರ ಫೆಬ್ರುವರಿ 21 ರಂದು ಆರಂಭಿಸಿ 1932ರ ಜೂನ್ 19 ರವರೆಗೆ ನಾಲ್ಕು ತಿಂಗಳ ಕಾಲ ಗೀತೆಯ 18 ಅಧ್ಯಾಯಗಳ ಮೇಲೆ ವಿವರವಾಗಿ ಮಾತನಾಡಿದರು. ಈ ಉಪನ್ಯಾಸಗಳ ಸಂಕಲನವೇ 'ಗೀತಾ ಪ್ರವಚನ'. ಇದೊಂದು ಅಪೂರ್ವ ಗ್ರಂಥ ಎನಿಸಿತು. ಇದು ಭಾರತದ ಎಲ್ಲ ಭಾಷೆಗಳ ಲ್ಲಿಯೂ ಪ್ರಕಟಗೊಂಡಿದೆ. ಲಕ್ಷೋಪಲಕ್ಷ ಜನರ ಮನಸ್ಸಿಗೆ ಸಾಂತ್ವನ ನೀಡಿದೆ. ಇದನ್ನು ಕುರಿತು ವಿನೋಬಾಜೀ 'ನಿತ್ಯ ಪಠನೀಯ' ಎಂದಿದ್ದಾರೆ. ಅದು ಸೆರೆಮನೆಯಲ್ಲಿ ಜನತೆಯಲ್ಲಿದ್ದ ಮಿತ್ರರ ಸೇವೆಗಾಗಿ ಮೂಡಿ ಬಂದಿತಲ್ಲವೆ ? ವಿನೋಬಾ ಇದರ ಬಗೆಗೆ ಬರೆಯುತ್ತಾ, "ಈ ಪ್ರವಚನದ ನೆಪದಿಂದ ಗೀತೆಯ ಸೇವೆ ಮಾಡುವ ಸುಯೋಗವನ್ನು ದೇವರು ನನಗೆ ಕೊಟ್ಟ. ಅವನ ಅಪಾರ ಕೃಪೆ. ಇದನ್ನು ಬರೆದಿಟ್ಟುಕೊಳ್ಳಲು ಸಾನೇಗುರುಜಿಯಂಥ ಸಿದ್ಧಹಸ್ತ ಸತ್ಪುರುಷರು ಲಭಿಸಿದರು. ಹಿಂದೂಸ್ತಾನದಲ್ಲಿ ಈ ಪ್ರವಚನ ಎಲ್ಲೆಲ್ಲಿ ಮುಟ್ಟಿದೆಯೋ ಅಲ್ಲಲ್ಲಿ ಹೃದಯಶುದ್ಧಿಯ, ಕ್ರಿಯಾ ಪರಿವರ್ತನದ ಪ್ರೇರಣೆ ಕೊಟ್ಟಿದೆ. ಮನೆಮನೆಯಲ್ಲೂ ಇದರ ಶ್ರವಣ-ಪಠಣ-ಮನನ ಆಗಬೇಕೆಂದು ನನ್ನ ಅಭಿಲಾಷೆ. ತುಕಾರಾಮರ ಭಾಷೆಯಲ್ಲಿ "ನನ್ನ ತಂದೆ ವಿಠಲ (ದೇವರು) ನನಗೆ ಮಾತು ಕಲಿಸಿ ತಾನೇ ಈ ಚಮತ್ಕಾರವನ್ನು ಕಂಡು ಹಿಗ್ಗುತ್ತಿದ್ದಾನೆ" ಎಂದಿದ್ದಾರೆ.

ಮಧುರಪೀಯೂಷ ಪಾನ

ಗೀತಾಪ್ರವಚನ ಗದ್ಯರೂಪದ ಸುಂದರ ಕಾವ್ಯ. ಅದನ್ನು ಓದಲು ಮೊದಲಿಡುವುದೇ ತಡ ತಾಯ ಅಂಕದಲ್ಲಿ ಮಲಗಿ ಮಧುರ ಪೀಯೂಷ ಪಾನದ ಅನುಭವ ಬರುತ್ತದೆ. ಕನ್ನಡ ಅನುವಾದ ಸಿದ್ಧಹಸ್ತರೆಂದು ಹೆಸರಾಂತ ದಿವಂಗತ ಸಿದ್ದವನಹಳ್ಳಿ ಕೃಷ್ಣಶರ್ಮರದು. ಅವರ ಶೈಲಿ ಅವರದೇ. ಕನ್ನಡಕ್ಕೆ ಹೊಸಶೈಲಿ ನೀಡಿದ ಕೀರ್ತಿ ಅವರದು. ಒಂದು ಲಕ್ಷಕ್ಕೆ ಮೇಲ್ಪಟ್ಟು ಕನ್ನಡಿಗರ ಹಸ್ತ ಸೇರಿ ಸಾರ್ಥಕವೆನಿಸಿದೆ ಅದು.

ಕನ್ನಡದಲ್ಲಿ ಗೀತಾ ಪ್ರವಚನ 306 ಪುಟಗಳಲ್ಲಿ ವಿಸ್ತೃತವಾಗಿದೆ. ಅದರ ಜತೆಗೆ ಕೆಲವು ವಿವರಣಾತ್ಮಕ ಅಂಶಗಳೂ ಸೇರಿವೆ. ಅವು ಪರಿಶಿಷ್ಟ ಗಳೆನಿಸಿ 13 ಪುಟಗಳಷ್ಟಿವೆ. ಮೂಲ ಸಂಸ್ಕೃತ ಗೀತೆಯಲ್ಲಿರುವಂತೆ ಇಲ್ಲೂ 18 ಅಧ್ಯಾಯಗಳಿವೆ. 108 ಪರಿಚ್ಛೇದಗಳಲ್ಲಿ ವಿಷಯವ್ಯಾಪ್ತಿ ಹರಡಿದೆ. ಮೂಲದಲ್ಲಿ ಒಂದೊಂದು ಅಧ್ಯಾಯವೂ ಒಂದೊಂದು 'ಯೋಗ' ಎನಿಸಿದೆ. ಅರ್ಜುನ ವಿಷಾದಯೋಗದಿಂದ ಆರಂಭಿಸಿ 'ಮೋಕ್ಷ ಸಂನ್ಯಾಸಯೋಗ' ದಲ್ಲಿ ಪರಿಸಮಾಪ್ತಿಯಾಗುತ್ತದೆ. ಇದು ಸಾಮಾನ್ಯವಾಗಿ ಗೀತೆಯ ಮೇಲೆ ಬರೆದಿರು ವವರ ಕ್ರಮ. ಆದರೆ ವಿನೋಬಾ ತಮ್ಮ ಪ್ರವಚನದ ಅಧ್ಯಾಯಗಳಿಗೆ ಬೇರೆ ಶೀರ್ಷಿಕೆಯನ್ನೇ ಕೊಟ್ಟಿದ್ದಾರೆ. ಅದರಿಂದಲೇ ಅವರ ಸ್ವತಂತ್ರ ವಿಚಾರವನ್ನು ಅರಿಯಬಹುದು. ಇದಕ್ಕೆ ಕಾರಣವಿಲ್ಲದೆ ಇಲ್ಲ.

ಗೀತೆಯಲ್ಲಿ ವಿಷಯಗಳ ಪುನರಾವರ್ತನೆ

ಗೀತೆಯಲ್ಲಿ ಹಲವಾರು ವಿಷಯಗಳು ಪುನರಾವರ್ತನೆ ಆಗುತ್ತವೆಂದು ಹಿಂದೆಯೇ ಹೇಳಿದೆ. ಬೇರೆ ಬೇರೆ ಅಧ್ಯಾಯಗಳಲ್ಲಿ ಒಂದೇ ವಿಚಾರ ಪದೇ ಪದೇ ಬರಬಹುದು. ಇದಕ್ಕೆ ಕೆಲವು ಉದಾಹರಣೆ ನೋಡಿ.

1. ಆತ್ಮ : 2–11, 30, 6-5-6,
2. ಈಶ್ವರ : 4–6, 15–17 ; 13–28, 18-61
3. ಕರ್ಮ : 2–49, 3–5, 7, 9, 15, 19, 23
   4–9, 15–19, 23; 5, 11,
   6-1, 3, 7-29 ; 8-1, ; 16–24 ; 17–27

18–3, 5, 8, 10, 15, 18, 19, 23, 25, 48

4. ಭಕ್ತಿ : 4-3 ; 7-16 18, 25, 28
6-14, 15, 31, 33-12–53, 20;
18-55, 65, 66

5 ಜ್ಞಾನ : 3.39, 40; 4-34, 39 ; 5-15, 16
7-2, 9-1; 10-4, 38, 12-12 ;
13-2, 11–17, 18, 14–1, 2, 9, 11
17 ; 15–15 ; 18–21, 42, 63

ಗೀತಾಪ್ರವಚನದ ವೈಶಿಷ್ಟ್ಯ

ಹೀಗೆಯೇ ಧರ್ಮ, ಸ್ವಧರ್ಮ, ಪ್ರಕೃತಿ–ಪುರುಷ, ಪುರುಷೋತ್ತಮ ಸಮಾಧಿ, ಸ್ಥಿತಪ್ರಜ್ಞ, ಸೃಷ್ಟಿ, ಮಾಯಾ, ಮೋಹ ಮುಂತಾದ ಅನೇಕ ಪ್ರಮೇಯಗಳಿಗೆ ಉಲ್ಲೇಖನ ಕಾಣಬಹುದು. ಆದರೆ ಗೀತಾಪ್ರವಚನ ಓದಿದಾಗ ಎಲ್ಲವುಗಳ ವ್ಯಾಖ್ಯೆ ಸುಸಂಬದ್ಧ ರೀತಿಯಲ್ಲಿ ಮೇಳವಿಸಿರುವುದು ಕಂಡು ಬರುತ್ತದೆ.

ಸಾಮಾನ್ಯವಾಗಿ ಗೀತಾ ವಿಷಯ ಸಂದರ್ಭವನ್ನು ಮೂರು ವಿಭಾಗಗಳಾಗಿ ವಿಂಗಡಿಸುವುದುಂಟು. ಆರು ಆರು ಅಧ್ಯಾಯ್ಯಗಳಿಗೆ ಒಂದೊಂದು ಷಟ್ಕ ಎನ್ನುವರು. ಮೊದಲ ಆರು ಕರ್ಮಯೋಗ. ಎರಡನೆಯ ಷಟ್ಕ ಭಕ್ತಿ ಅಥವಾ ಉಪಾಸನಾಯೋಗ. ಮೂರನೆಯ ಆರು ಜ್ಞಾನಯೋಗ. ಇದು ಸಾಂಪ್ರದಾಯಿಕ ವಿಧಾನ. ಗೀತೆಯ ಅಧ್ಯಯನ ವಿಧಾನವನ್ನು ವಿನೋಬಾ ಈ ಕೆಳಕಂಡ ವಿಷಯಗಳಿಗನುಗುಣವಾಗಿ ವಿಂಗಡಿಸಿದಾರೆ.

1 ಮತ್ತು 2 : (ಸ್ಥಿರಬುದ್ಧಿ) (ಇಡಿಯ ಪ್ರವಾಸ ಸ್ವಲ್ಪದರಲ್ಲಿ)
3 4 5 : ನಿಷ್ಕಾಮಕರ್ಮ, (ಪ್ರವಾಸ ವಿಸ್ತಾರವಾಗಿ)
6 7 8 : ಧ್ಯಾನ ಮಾರ್ಗ (ಅವ್ಯಕ್ತೋಪಾಸನೆ)
9–10–11–12 : ಭಕ್ತಿಮಾರ್ಗ (ರಾಜವಿದ್ಯೆ–ಅವ್ಯಕ್ತಕ್ಕೆ ಅವಿರೋಧಿಯಾದ ವ್ಯಕ್ತೋಪಾಸನೆ)
13-14-15 : ಜ್ಞಾನ ಮಾರ್ಗ (ವಿಚಾರ-ವಿವೇಕ)

16-17 : ಶುಭ ವೃತ್ತಿ (ಶುಭಕೃತಿ ಸಹಿತ)
18 ; ತ್ಯಾಗ.

ಇದು ಒಂದುವಾರದ ಕಾಲದಲ್ಲಿ ಗೀತೆಯನ್ನು ಅಭ್ಯಾಸ ಮಾಡುವ ಕ್ರಮ. ಈ ಕ್ರಮದಲ್ಲಿ ಅಧ್ಯಾಯಗಳಿಗೆ ಕೊಟ್ಟಿರುವ ಹೆಗ್ಗುರುತನ್ನು ಮನದಲ್ಲಿ ಇಟ್ಟುಕೊಂಡಿರಬೇಕು. ಇದರ ಜತೆಗೆ ಗೀತಾಪ್ರವಚನ ಓದುವಾಗ, ವಿನೋಬಾ ಕೊಟ್ಟಿರುವ 18 ಅಧ್ಯಾಯದ ಶೀರ್ಷಿಕೆಗಳು ಬಹಳ ಉಪಯುಕ್ತ.

ಹೀಗೆ ಗೀತಾಪ್ರವಚನ, ಮೂಲದ ಬಗೆಗೆ ಪಾಠಕನ ದೃಷ್ಟಿಯನ್ನು ವಿಶದಗೊಳಿಸುತ್ತವೆ. ಅಷ್ಟೇ ಅಲ್ಲ. ವಿವರಣಾತ್ಮಕವಾಗಿ ಉಪನಿಷತ್ತುಗಳು, ರಾಮಾಯಣ ಮತ್ತು ಮಹಾಭಾರತಗಳಿಂದ ದೃಷ್ಟಾಂತಗಳನ್ನು ಕೊಟ್ಟು ಅಭಿಪ್ರಾಯಗಳನ್ನು ಸ್ಪಷ್ಟಗೊಳಿಸುತ್ತದೆ. ಆದುದರಿಂದ ವ್ಯಾಸಂಗವು ಸ್ವಲ್ಪವೂ ಆಯಾಸ ಕಾಣುವುದಿಲ್ಲ. ಓದಿಕೊಂಡು ಹೋದಂತೆ ಆಹ್ಲಾದ ಜನಿಸಿ ಭಾವ ಬುದ್ಧಿಗಳು 'ವ್ಯಕ್ತಿಯ ಆಜೀವಿಕೆ (ಶರೀರಯಾತ್ರೆ) ಸಮಾಜಸೇವೆ (ಯಜ್ಞ) ಚಿತ್ತಶುದ್ಧಿ (ಸಂಸಿದ್ಧಿ) ಲೋಕಸಂಗ್ರಹ-ಇವು ಕರ್ಮಮಾಡಲು ಉತ್ತರೋತ್ತರ ಕಾರಣಗಳಾಗುತ್ತವೆ. (ಗೀತಾಪ್ರವಚನ ಪರಿಶಿಷ್ಟದಿಂದ) ಈ ರೀತಿ ಅಂತಿಮವಾಗಿ ಬೆಳಕಿನಂತೆ ಸ್ಪಷ್ಟವಾಗುವ ವಿಷಯವೆಂದರೆ 'ಬುದ್ಧಿಯೇನೋ ಶ್ರೇಷ್ಠವೇ, ಆದರೆ ಕರ್ಮದ ಹೊರತು ಅದು ಪ್ರಾಪ್ತವಾಗುವುದೇ ಇಲ್ಲ'.

[ಆ] ಗೀತಾ ಪ್ರವಚನದ ಅಂತರಂಗ ವಿವೇಚನೆ

ಗೀತಾ ಪ್ರವಚನದ ಭೂಮಿಕೆ

ಇನ್ನು ಗೀತಾಪ್ರವಚನದ ಅಂತರಂಗವನ್ನು ಸಂಗ್ರಹವಾಗಿ ತಿಳಿಯಲೆತ್ನಿಸೋಣ. ಆರಂಭವೇ ಕೀಲಿಕೈಯಂತಿದೆ. ವಿನೋಬಾ ಅತ್ಯಂತ ಕೇಂದ್ರೀಕೃತ ಮನಸ್ಸುಳ್ಳವರಾಗಿದಾರೆ. ಗೀತೆಗೂ ಅವರಿಗೂ ಅವಿನಾಭಾವ ; ಅದ್ವೈತಭಾವ. "ಗೀತೆಗೂ ನನಗೂ ಇರುವ ಸಂಬಂಧ ತರ್ಕಕ್ಕೆ ಮೀರಿದ್ದು. ನನ್ನ ಮೈ ತಾಯ ಹಾಲಿನಿಂದ ಬೆಳೆದಿದೆ. ಆದಕ್ಕಿಂತ ಹೆಚ್ಚಾಗಿ ನನ್ನ ಹೃದಯ ಮತ್ತು ಬುದ್ಧಿ ಗೀತೆಯ ಹಾಲಿನಿಂದ ಬೆಳೆದಿದೆ. ಎಲ್ಲಿ ಜೀವಾಳದ ಸಂಬಂಧ ಇರುತ್ತದೋ ಅಲ್ಲಿ ತರ್ಕಕ್ಕೆ ಎಡೆಯಿಲ್ಲ. ತರ್ಕವನ್ನುಳಿದು ಶ್ರದ್ಧೆ, ಪ್ರಯೋಗ ಈ ಎರಡೂ ರೆಕ್ಕೆ

ಗಳನ್ನು ಕೆದರಿ ಗೀತಾಗಗನದಲ್ಲಿ ನಾನು ಯಥಾಶಕ್ತಿ ವಿಹರಿಸುತ್ತೇನೆ. ಬಹುಶಃ ನಾನು ಗೀತೆಯ ವಾತಾವರಣದಲ್ಲೇ ಇದೇನೆ. ಗೀತೆಯೆಂದರೆ ನನ್ನ ಪ್ರಾಣತತ್ತ್ವ ಗೀತೆಯ ಬಗ್ಗೆ ನಾನು ಯಾರಿಗಾದರೂ ಹೇಳಿದರೆ ಆಗ ಗೀತಾಸಮುದ್ರದ ಮೇಲೆ ತೇಲಾಡುತ್ತಿರುತ್ತೇನೆ. ನಾನೊಬ್ಬನೇ ಇದ್ದರೆ ಆ ಅಮೃತದ ಕಡಲಿನಲ್ಲಿ ಆಳವಾಗಿ ಮುಳುಗಿರುತ್ತೇನೆ."

ಇದು ಗೀತಾ ಪ್ರವಚನದ ಭೂಮಿಕೆ. ವಿನೋಬಾಜಿ ಮನಸ್ಸಿನ ಪರಿಪಾಕ. ಈ ದೃಷ್ಟಿ ಅರ್ಥವಾದರೆ ಉಳಿದುದೆಲ್ಲ ಗೌಣ. ಇದೇ ಪೃಷ್ಟಭೂಮಿ ಪಾಠಕನಲ್ಲೂ ಇರಬೇಕು. ಇದು ಸಿದ್ಧಿಸಿದರೆ ಗೀತಾಪ್ರವಚನದ ಅಮೃತ ಪ್ರಾಶನ ಸಿದ್ಧ. ಮೂರಾಬಟ್ಟೆ ಹರಿದ ಮನಸ್ಸಿಗೆ ಇಂಬು ಲಭ್ಯ. ಸ್ಥಿರಬುದ್ಧಿ ಅಂಗೈ ನೆಲ್ಲಿಕಾಯಿ. ಇದನ್ನೇ ಸ್ಥಿತಪ್ರಜ್ಞ ಎನ್ನುವುದು.

ಸ್ಥಿತಪ್ರಜ್ಞೆಯೇ ಭಗವದ್ಗೀತೆಯ ಗುರಿ. ಅರ್ಜುನ ಇದನ್ನು ಬಾಳಿನ ಸಂದಿಗ್ಧ ಸಮಯದಲ್ಲಿ ಕಳೆದುಕೊಂಡಿದ್ದನೆಂದು ಹಿಂದೆಯೇ ಹೇಳಿದೆಯಲ್ಲವೇ? ಇದಕ್ಕೆ ಮೋಹವೇ ಕಾರಣ. 'ನಾನು', 'ನನ್ನವರು' 'ನನ್ನದು' ಎಂಬುದೇ ಆ ಮೋಹ. ಮೋಹ ನಿರಸನಕ್ಕೇ ಗೀತಾಬೋಧೆ. ಸ್ಥಿತಪ್ರಜ್ಞೆಯಿಲ್ಲದೆ ಆಚರಿಸಿದ ಕರ್ಮ, ಭಕ್ತಿ, ಜ್ಞಾನ ಎಲ್ಲವೂ ನಿರರ್ಥಕ.

ಒಂದನೇ ಅಧ್ಯಾಯದಲ್ಲಿ ಸಮಸ್ಯೆಯ ಬೃಹದ್ರೂಪ ಪರಿಚಯವಾದರೆ ಎರಡನೇ ಅಧ್ಯಾಯದಲ್ಲಿ ಅದನ್ನು ಪರಿಹಾರ ಮಾಡಲು ಆವಶ್ಯಕವಾದ ತತ್ತ್ವ ಸಿದ್ಧಾಂತ ಮಂಡನೆ. ಇದನ್ನು ಅರಿಯುವಾಗ ಗೀತೆಯ ಪರಿಭಾಷೆ ಯುಗ ಯುಗಕ್ಕೆ ತಕ್ಕಂತೆ ಬದಲಾಗಿದೆ. ಸ್ವಾನುಭವದ ಅರ್ಥ ಅವರವರ ಮನೋವೃತ್ತಿಗೆ ತಕ್ಕಂತೆ. ಇದಕ್ಕೆ ಪೋಷಕವಾಗಿ ವಿನೋಬಾ ಉಪನಿಷತ್ತಿನ ಸುಂದರ ಕಥೆಯನ್ನು ಹೇಳುತ್ತಾರೆ: "ಒಮ್ಮೆ ದೇವ, ಮಾನವ, ದಾನವರೆಲ್ಲರೂ ಪ್ರಜಾಪತಿಯ ಬಳಿಗೆ ಉಪದೇಶಕ್ಕಾಗಿ ಹೋದರು. ಪ್ರಜಾಪತಿ ಎಲ್ಲರಿಗೂ 'ದ' ಎಂಬ ಒಂದೇ ಶಬ್ದವನ್ನು ಹೇಳಿದ. ದೇವತೆಗಳೆಂದರು 'ನಾವು ದೇವತೆಗಳು ಕಾಮಿಗಳು, ಭೋಗದ ಚಾಳಿಯುಳ್ಳವರು 'ದ' ಎಂಬಕ್ಷರ ಹೇಳಿ, ದಮನ ಮಾಡಿ, ಎಂದು ಪ್ರಜಾಪತಿ ನಮಗೆ ಬೋಧಿಸಿದ. ದಾನವರೆಂದರು 'ನಾವು ದಾನವರು, ಕ್ರೋಧಿಗಳು, ದಯೆಯೇ ಇಲ್ಲದವರು 'ದ' ಎಂಬ ಅಕ್ಷರ ಹೇಳಿ ದಯಾವಂತರಾಗಿ, ಎಂದು ಪ್ರಜಾಪತಿ ನಮಗೆ ಉಪದೇಶಿಸಿದ. ಮಾನವ

ರೆಂದರು-, ಮಾನವರು ನಾವು ಲೋಭಿಗಳು, ಸಂಚಯದ ಬೆನ್ನು ಹತ್ತಿ ಹುಚ್ಚ ರಾದವರು. 'ದ' ಎಂಬಕ್ಷರ ಹೇಳಿ ದಾನಮಾಡಿ ಎಂದು ಪ್ರಜಾಪತಿ ಬೋಧಿಸಿದ ನಮಗೆ. ಪ್ರಜಾಪತಿ ಎಲ್ಲರ ಅರ್ಥವನ್ನೂ ಸರಿಯೆಂದ. ಎಲ್ಲರೂ ತಮ್ಮ ಸ್ವಾನುಭವಕ್ಕೆ ತಕ್ಕಂತೆ ಅರ್ಥಮಾಡಿದರು." ಗೀತೆಯ ಪರಿಭಾಷೆಗೆ ಅರ್ಥಮಾಡುವಾಗ ಈ ಕಥೆ ನೆನಪಿರಲಿ.

ಗೀತೆಯು ಶಬ್ದಗಳೇನೋ ಹಳೆಯುವೇ. ಹಳೆಯ ಶಬ್ದಕ್ಕೆ ಹೊಸ ಅರ್ಥ 'ವಿಚಾರಕ್ರಾಂತಿಯ ಅಹಿಂಸಕ ರೀತಿ' 'old story in a new style' ಎಂಬಂತೆ. ಗೀತೆಯಲ್ಲಿಯೇ 'ಯಜ್ಞ' ಶಬ್ದಕ್ಕೆ ನಾನಾ ಅರ್ಥಗಳು ಬಂದಿವೆ, ಮೊದಲು ದ್ರವ್ಯ ಯಜ್ಞದಲ್ಲಿ ಆರಂಭವಾದುದು ಜ್ಞಾನಯಜ್ಞದಲ್ಲಿ ಪರಿಸಮಾಪ್ತಿಯಾಗಿದೆ. ಇದು ಗೀತೆಯ ಸಮನ್ವಯ ದೃಷ್ಟಿ. ಮಾನವ ಪಶುತ್ವದಿಂದ, ಹಿಂಸಾಕೃತ್ಯದಿಂದ ಮೇಲೇರಿ ಉದಾತ್ತ ಭಾವನೆಗಳನ್ನು ಸ್ವಾಗತಿಸಿದಂತೆ ಸಮಾಜರೂಪೀ ಭಗವಂತನಿಗೆ ಸಮರ್ಪಿತ ಕಾಯಕ ಎಂದಾಯಿತು. ಅದನ್ನೇ ಗಾಂಧೀಜಿ 'ಚರಕಾ' ಒಂದು ಯಜ್ಞಕಾರ್ಯ ಎಂದರು. ಅದು 'ಸೂತ್ರ ಯಜ್ಞ' ಎಂದಾಯಿತು. ವಿನೋಬಾಜಿ ಅದನ್ನು ಸಮಾಜದಲ್ಲಿ ಆರ್ಥಿಕ ಕ್ರಾಂತಿ ತರಲು ಯತ್ನಿಸಿ ರಾಷ್ಟ್ರಾದ್ಯಂತ ಆಂದೋಲನ ನಡೆಸಿದಾಗ ಭೂದಾನ ಯಜ್ಞ ಅಥವಾ 'ಭೂಕ್ರಾಂತಿ'ಯ ರೂಪ ಪಡೆಯಿತು. ಇದೆಲ್ಲ ಗೀತೆಯ ಕಾಲ ಕಾಲದ ಶಾಬ್ದಿಕ ಮೀಮಾಂಸೆ. ಗೀತಾಪ್ರವಚನ ಓದುವಾಗ ಇದನ್ನು ನೆನಪಿನಲ್ಲಿ ಇಟ್ಟುಕೊಂಡಿರಬೇಕು.

ಇಲ್ಲಿ ಒಂದು ಮಾತು ಪ್ರಕೃತವೆನಿಸುತ್ತದೆ. ಜಗತ್ತಿನ ಮಹಾಪುರುಷರೂ ಪ್ರವಾದಿಗಳೂ ಹೇಳಿದುದು. ಅದು "I Come not to destroy, but to fulfil." ಕೃಷ್ಣನಾಗಲೀ, ಬುದ್ಧನಾಗಲಿ, ಏಸುವಾಗಲೀ, ಮೊಹಮದ್ ಪೈಗಂಬರ್ ಆಗಲೀ, ಗಾಂಧಿಯಾಗಲೀ, ಹೇಳಿದುದು ಇದನ್ನೇ. ಅವರುಗಳು ನಾಶ ಮಾಡಲೆತ್ನಿಸಿದುದು ಅನ್ಯಾಯವನ್ನು, ಅಧರ್ಮವನ್ನು. ಅವರು ಸ್ಥಾಪಿಸಲೆತ್ನಿಸಿದುದು ಸತ್ಯವನ್ನು ಅನಾದಿಯಿಂದ ಬಂದ ಧರ್ಮವನ್ನು.

ಮೂರು ಜೀವನ ಸಿದ್ಧಾಂತಗಳು

ಮಾನವ ಜೀವನ ಒಂದು ಶಾಸ್ತ್ರವೂ ಹೌದು, ಒಂದು ಕಲೆಯೂ

ಹೌದು. ಶಾಸ್ತ್ರ ಹೇಳುತ್ತದೆ, ಕಲೆ ಮಾಡುತ್ತದೆ. ಜೀವನಕ್ಕೆ ಒಂದು ಸಿದ್ಧಾಂತ, ಒಂದು ಸ್ಪಷ್ಟಜ್ಞಾನ ಆವಶ್ಯಕ. ಅದು ಧ್ರುವನಕ್ಷತ್ರ ಇದ್ದ ಹಾಗೆ. ಆದರತ್ತ ಗುರಿಯಿಂದ ಗುರಿಗೆ, ಕ್ಷಿತಿಜದಿಂದ ಕ್ಷಿತಿಜಕ್ಕೆ, ಸಂತತ ಪಯಣ, ಯಾತ್ರೆ. ಯುಗಯುಗಗಳು, ಜನ್ಮಾಂತರಗಳು, ಅಥವಾ ಅರಸುವವರಿಗೆ ಸ್ಥಿರಬುದ್ಧಿ ಕಂಡು, ವಾಸನೆಗಳು ಅಳಿದಾಗ ಒಂದೇ ಏಟಿಗೆ ಗುರಿ ಸಿದ್ಧಿಯಾಗಬಹುದು. ಜೀವಿತದಲ್ಲಿ ಅಮೃತಕಳಸ ಕರಗತವಾಗಬಹುದು.

ಜೀವನ ಒಂದು ಶಾಸ್ತ್ರ, ಒಂದು ಕಲೆ ಎಂಬ ವಿನೋಬಾ ಮಾತನ್ನು ಹಿಂದೆ ಹೇಳಿದೆಯಲ್ಲ. ಶಾಸ್ತ್ರ ಬುದ್ಧಿಗೆ ಕಸರತ್ತು. ಕಲೆಯೋ ಸೌಂದರ್ಯವನ್ನು ಸೃಷ್ಟಿಸುತ್ತದೆ. ಜೀವನವು ಒಂದು ಕಲೆಯೇ ಆಗಬೇಕು. ಅಂದರೆ, ಸತ್ಯ, ಸುಂದರ, ಸೌಶೀಲ್ಯವಾಗಬೇಕು. (Truth, Beauty, Goodness) ಅಥವಾ ಸತ್ಯ, ಸುಂದರ, ಶಿವ ಆಗಬೇಕು.

ಇದಕ್ಕೆ ಒಂದು ಸಿದ್ಧಾಂತದ ಅವಲಂಬನೆ ಇದೆ. ಗೀತೆ ಇದನ್ನು ಬೆಳಕಿನಷ್ಟು ಸ್ಪಷ್ಟವಾಗಿ ಹೇಳುತ್ತದೆ. ವಿನೋಬಾ ಗೀತಾಪ್ರವಚನದಲ್ಲಿ ಹೀಗೆ ಉಲ್ಲೇಖಿಸಿದ್ದಾರೆ : 'ಎರಡನೆಯ ಅಧ್ಯಾಯದಲ್ಲಿ ಜೀವನದ ಮೂರು ಮಹಾ ಸಿದ್ಧಾಂತಗಳನ್ನು ನಿರ್ದೇಶಿಸಲಾಗಿದೆ. ಒಂದು–ಆತ್ಮದ ಅಮರತೆ. ಅಖಂಡತೆ; ಎರಡು–ದೇಹದ ಕ್ಷುದ್ರತೆ ; ಮೂರು–ಸ್ವಧರ್ಮದ ಅಬಾಧಿತತೆ. ಈ ಮೂರರಲ್ಲಿ ಸ್ವಧರ್ಮದ ಸಿದ್ಧಾಂತ ಕರ್ತವ್ಯ ರೂಪವಾದುದು. ಉಳಿದೆರಡೂ ಜ್ಞಾತವ್ಯ' ಜ್ಞಾತವ್ಯ ಎಂದರೆ ಸದಾನೆನಪಿನಲ್ಲಿ, ಜ್ಞಾಪಕದಲ್ಲಿ ಇರಬೇಕಾದುದು.

ಮೊದಲು ಸ್ವಧರ್ಮ ಎಂದರೇನು ? ನೋಡೋಣ. ಇದು ಕರ್ತವ್ಯ ರೂಪವಾದುದು ಎಂದು ಹೇಳಿದೆ. ಯಾರಿಗೆ ಕರ್ತವ್ಯ ರೂಪವಾಗಿ ಬಂದುದು? ತನಗೆ ಕರ್ತವ್ಯರೂಪವಾಗಿ ಬಂದುದು. ಇತರರಿಗಲ್ಲ. ಕರ್ತವ್ಯ ಎಂದರೆ ಮಾಡಲೇಬೇಕಾದುದು. ಮಾಡದೆ ಬಿಟ್ಟರೆ ಕೆಡುಕು ಉಂಟಾಗುತ್ತದೆ. ವಿನೋಬಾ ಹೇಳುವುದನ್ನು ಕೇಳಿ ; "ಪರರ ಧರ್ಮ ಸುಲಭವಾದರೂ ಸಂಗ್ರಾಹ್ಯವಲ್ಲ. ಅನೇಕ ಸಲ ಸುಲಭವಾಗಿ ಕಾಂಬುದು ಬರಿಯ ತೋರಿಕೆ. ಸಂಸಾರದಲ್ಲಿ ಹೆಂಡತಿ ಮಕ್ಕಳ ಪೋಷಣೆ ಮಾಡುವ ತಾಪತ್ರಯ ಕಷ್ಟವೆಂದು ಗೃಹಸ್ಥರು ಸಂನ್ಯಾಸ ತೆಗೆದುಕೊಂಡರೆ ಅದು ಬರೀ ವೇಷ. ಅದು ಭಾರವಾದೀತು. ಅವಕಾಶ ಸಿಕ್ಕರೆ ಅದರ ವಾಸನೆ ಉಕ್ಕುತ್ತದೆ. ಸಂಸಾರದ ಹೊರೆ ಭಾರವೆಂದು

ಅಡವಿಗೆ ಹೋದವನು ಅಲ್ಲಿಯೂ ಒಂದು ಗುಡಿಸಲು ಕಟ್ಟುತ್ತಾನೆ. ಅದರ ರಕ್ಷಣೆಗಾಗಿ ಒಂದು ಬೇಲಿ ಹಾಕುತ್ತಾನೆ. ಹೀಗೆ ಮಾಡುತ್ತಾ, ಮಾಡುತ್ತಾ, ಸಂಸಾರದ ಎಲ್ಲ ಕೋಟಲೆಯೂ ಅವನ ಪಾಲಿಗೆ ಬರುತ್ತದೆ. ನಿಜವಾದ ವೈರಾಗ್ಯ ವೃತ್ತಿ ಇದ್ದವರಿಗೆ ಸಂನ್ಯಾಸ ಕಠಿಣವಲ್ಲ. ಮುಖ್ಯವಾದ ಅಂಶ ವೃತ್ತಿ. ಅವನ ವನನೈಜ ವೃತ್ತಿಯಂತೆ ಅವನವನ ಧರ್ಮ, ಶ್ರೇಷ್ಠ, ಕನಿಷ್ಠ. ಸುಲಭ, ಕಷ್ಟ, ಅದರಲ್ಲಿಲ್ಲ, ನಿಜವಾದ ವಿಕಾಸವಾಗಬೇಕು. ಸತ್ಯವಾದ ಪರಿಣತಿಯಾಗಬೇಕು.

ಹೀಗೆ ಸ್ವಧರ್ಮ ಆಚರಿಸುವುದರಿಂದ ವ್ಯಕ್ತಿ ಕಲ್ಯಾಣ, ಸಮಾಜ, ಕಲ್ಯಾಣ, ಲೋಕ ಕಲ್ಯಾಣ ಸಹಜವಾಗಿ ಆಗುತ್ತದೆ. ಇವುಗಳಲ್ಲಿ ಪರಸ್ಪರ ವಿರೋಧವಿಲ್ಲ. ಒಂದು ಮತ್ತೊಂದಕ್ಕೆ ಸಹಜ, ಪೂರಕ ಆಗಬೇಕು. ಇದು ಸ್ಥಾಪಿತವಾಗಬೇಕಾದರೆ ಇನ್ನೆರಡು ಜೀವನದ ಮಹಾತತ್ತ್ವಗಳು ಹಿನ್ನೆಲೆಯಲ್ಲಿ ಇರಬೇಕು.

ಆತ್ಮ : ಅಮರ-ಅಖಂಡ

ನಾವು ಸಕಲ ಕರ್ಮಗಳನ್ನು ದೇಹದ ಮೂಲಕ ಮಾಡುತ್ತೇವೆ. ದೇಹವೇ ಸ್ವತಂತ್ರವಾಗಿ ಮಾಡಲಾರದು. ದೇಹ ಕ್ಷುದ್ರ; ಎಂದರೆ ಅಶಾಶ್ವತ. ಅದು ಪರಿವರ್ತನೆಗೆ ಬದ್ಧವಾಗಿ ಕೊನೆಗೆ ಒಂದು ದಿನ ಇಲ್ಲವಾಗುತ್ತದೆ. ಇರುವವರೆಗೂ ಅಲ್ಪ ಸ್ವಲ್ಪ ಬೆಲೆ. ದೇಹ ಸಾವುಗುಳಿ. ಇದರ ಆಟವೆಲ್ಲ ಒಂದು ಚೇತನದಿಂದ. ಆ ಚೇತನವೇ ಆತ್ಮ. ದೇಹವೆಂಬುದಕ್ಕೆ ಬೆಲೆಕೊಡುವಂಥದು. ಅದು ಅಮರವಾದುದು; ಅಖಂಡವಾದುದು. ಇದಕ್ಕೆ ಒಂದು ಉದಾಹರಣೆ ನೋಡಿ. ಗಡಿಗೆ ಎಂಬ ವಸ್ತುವಿದೆ. ಅದರಲ್ಲಿರುವ ಅವಕಾಶ ಆಕಾಶ ಸೀಮಿತ. ಅದು ಇರುವವರೆಗೂ ಅಷ್ಟೆ. ಅದು ಒಡೆದರೆ ಅದರಲ್ಲಿರುವ ಅವಕಾಶ ಎಲ್ಲಿ ಹೋಯಿತು ? ಸೀಮಿತ ಆಕಾಶ ಅಸೀಮಾ ಆಕಾಶದಲ್ಲಿ ಕೂಡಿತು. ಅದು ಎಲ್ಲ ಕಾಲಕ್ಕೂ ಇದೆ. ಅದೇ ಅಮರತೆ. ಅಂದರೆ ನಾಮ ರೂಪವರಿಯದ ಸ್ಥಿತಿ. ಯಾವ ನಾಮರೂಪ ಬೇಕಾದರೂ ತಾಳೀತು. ಆಗ ಖಂಡ ನಾಮ ರೂಪ ಇಲ್ಲದಾಗ ಅಖಂಡ. ಹೀಗೆಯೇ ನಾಮ ರೂಪ ಪಡೆದು ಕ್ಷುದ್ರವಾದ ದೇಹದಲ್ಲಿ ಅಮರವಾಗಬಲ್ಲ, ಅಖಂಡವಾಗಬಲ್ಲ, ಚೇತನ, ಆತ್ಮ ಇದೆ. ಇದು ನಮಗೆ ಸದಾ ಜ್ಞಾತವ್ಯವಾಗಿ, ನೆನಪಿನಲ್ಲಿದ್ದು ನಮ್ಮ ಕೃತಿಗಳಿಗೆ ಪ್ರೇರಕಶಕ್ತಿಯಾಗ

ಬೇಕು. ವಿನೋಬಾ ಮಾತು ಹೀಗಿದೆ; "ಇಷ್ಟು ತತ್ತ್ವಜ್ಞಾನ ಮನಸ್ಸಿನಲ್ಲಿ ನೆಲೆಯೂರಿ ನಿಂತರೆ ಸ್ವಧರ್ಮ ಸ್ವಲ್ಪವೂ ಕಷ್ಟವಾಗಲಿಕ್ಕಿಲ್ಲ. ಅಷ್ಟೇ ಅಲ್ಲ ಸ್ವಧರ್ಮವನ್ನು ಬಿಟ್ಟು ಬೇರೇನು ಮಾಡಲೂ ಕಷ್ಟವಾದೀತು. ಆತ್ಮತತ್ತ್ವದ ಅಖಂಡತೆ, ದೇಹದ ಕ್ಷುದ್ರತೆಗಳನ್ನು ಅರಿಯುವುದು ಕಷ್ಟವೇನಲ್ಲ. ಏಕೆಂದರೆ ಇವೆರಡೂ ಸತ್ಯ. ಆದರೆ ಈ ಬಗ್ಗೆ ವಿಚಾರ ಮಾಡಬೇಕು. ಬಾರಿ ಬಾರಿಗೂ ಅದನ್ನು ಮನದಲ್ಲಿ ಮೆಲುಕು ಹಾಕಬೇಕು. ಮೈಯ ಮಹತ್ವವನ್ನು ತಗ್ಗಿಸಿ ಆತ್ಮದ ಮಹತ್ತನ್ನು ಹೆಚ್ಚಿಸುವ ಈ ಕಲೆಯನ್ನು ನಾವು ಕಲಿಯಬೇಕು. ಈ ಮೈ ಗಳಿಗೆ–ಗಳಿಗೆಗೆ ಬದಲಾಗುತ್ತದೆ. ಬಾಲ್ಯ, ತಾರುಣ್ಯ, ವಾರ್ಧಿಕ್ಯ ಈ ಚಕ್ರ ಎಲ್ಲರಿಗೂ ಅನುಭವವುಂಟು. ಪ್ರತಿಕ್ಷಣಕ್ಕೂ ಸಾಯುತ್ತಾ ಇರುವ ಮೈಯೇ ನಿನ್ನ ರೂಪು. ಅದು ರೋಗಿ, ನೀನು ಮದ್ದು ಕೊಡುವವನು. ಅದು ಮೂರೂ ವರೆ ಮೊಳದ ನೆಲದಲ್ಲಿ ಬಿದ್ದಿದ್ದರೆ, ನೀನೋ ತ್ರಿಭುವನ ವಿಹಾರಿ. ಅದು ನಿತ್ಯ ಪರಿವರ್ತನಶೀಲ. ನೀನು ಆ ಪರಿವರ್ತನೆಯನ್ನು ನೋಡುವವನು. ಅದು ಸಾಯುವ ಸಾಮಗ್ರಿ, ನೀನು ಅದರ ಸಾವಿನ ವ್ಯವಸ್ಥಾಪಕ"

ನಿಷ್ಕಾಮ ಕರ್ಮ

ಕರ್ತವ್ಯ ರೂಪದ ಸ್ವಧರ್ಮವನ್ನು ಸಹಜ, ಸರಳ ಕರ್ಮವನ್ನು ಆತ್ಮ ಜ್ಞಾನದ ಮೂಲಕ ಮಾಡಿ ಸ್ಥಿರ ಬುದ್ಧಿಯನ್ನು ಗಳಿಸಿಕೊಳ್ಳಬೇಕೆಂದು ಎರಡನೆಯ ಅಧ್ಯಾಯದಲ್ಲಿ ಸಮಗ್ರ ವಿಧಾನದಿಂದ ಸೂಕ್ಷ್ಮವಾಗಿ ಬೋಧಿಸಿದರೂ ಅರ್ಜುನನ ಕದಡಿದ ಬುದ್ಧಿ ನೇರವಾಗಲಿಲ್ಲ. ಅವನಲ್ಲಿ ನೆಲೆ ಮಾಡಿದ್ದ ಮೋಹದ ಫಲವಾಗಿ ಶಂಕೆಗಳು ಉದ್ಭವಿಸಿದವು. ಆದುದರಿಂದ ಭಗವಂತ ಮೂರು, ನಾಲ್ಕು ಮತ್ತು ಐದನೆಯ ಅಧ್ಯಾಯಗಳಲ್ಲಿ ಸ್ವಧರ್ಮವನ್ನು ಆಚರಿಸುವ ಬಗೆಗೆ ಇನ್ನೂ ವಿವರಣೆಗಳನ್ನು ಕೊಡುತ್ತಾನೆ. ಅದನ್ನು ನಿಷ್ಕಾಮ ಕರ್ಮವನ್ನಾಗಿ ಮಾಡಬೇಕೆಂದು ಹೇಳುತ್ತಾನೆ.

ಸಾಮಾನ್ಯವಾಗಿ ಯಾವ ಕರ್ಮ ಮಾಡಬೇಕಾದರೂ ಮಾಡುವವನ ವೃತ್ತಿ ಎರಡು ಮುಖಗಳಲ್ಲಿ ವ್ಯಕ್ತಗೊಳ್ಳುತ್ತದೆ. ವಿನೋಬಾ ಅದನ್ನು ಕುರಿತು ಹೇಳುತ್ತಾರೆ; "ನಾವು ಕರ್ಮ ಮಾಡಿದ ಮೇಲೆ ಅದರ ಫಲವನ್ನು ನಾವೇ ಸವಿಯಬೇಕು; ಅದು ನಮ್ಮ ಹಕ್ಕು ಎಂಬುದು ಒಂದು. ತದ್ವಿರುದ್ಧವಾಗಿ

ನಮಗೆ ಫಲಸಿಗದಿದ್ದರೆ ನಾವು ಕರ್ಮವನ್ನೇ ಮಾಡುವುದಿಲ್ಲ. ಇದು ಆಸಕ್ತಿಯ ಫಲ. ಗೀತೆ ಇವೆರಡನ್ನೂ ಬಿಟ್ಟು ಮೂರನೆಯ ವೃತ್ತಿಯನ್ನು ಹೇಳುತ್ತದೆ. 'ಕರ್ಮ ಮಾಡು, ಫಲದ ಹಕ್ಕನ್ನು ಬಿಡು,' ಎನ್ನುತ್ತದೆ ಗೀತೆ. ಕರ್ಮ ಮಾಡಿದ ವನಿಗೆ ಫಲ ಇದ್ದೇ ಇದೆ. ನೀನದನ್ನು ನೀನಾಗಿಯೇ ಬಿಟ್ಟುಕೊಡು."

ಆದರೆ ಮನುಷ್ಯ ತ್ರಿಗುಣಗಳು ಆಡಿಸಿದಂತೆ ಆಡುತ್ತಾನೆ. ಅವನ ನಿರ್ಧಾರಗಳೆಲ್ಲ ಅವುಗಳಿಗೆ ತಕ್ಕಂತೆಯೇ. ರಜೋಗುಣ ಹೇಳುತ್ತದೆ. 'ತೆಗೆದು ಕೊಳ್ಳುವುದಿದ್ದರೆ ಫಲ ಸಮೇತ ತೆಗೆದುಕೊಳ್ಳುತ್ತೇನೆ'. ತಮೋಗುಣ ಹೇಳು ತ್ತದೆ-'ಬಿಡುವುದೇ ಇದ್ದರೆ ಕರ್ಮ ಸಮೇತ ಬಿಟ್ಟೇನು' ಎರಡೂ ಅಣ್ಣ ತಮ್ಮ ಎರಡನ್ನೂ ಮೀರಿ ಶುದ್ಧ ಸತ್ವಗುಣಿಯಾಗು. ಕರ್ಮವನ್ನು ಮಾಡಿ ಫಲವನ್ನು ಬಿಡು. ಫಲವನ್ನು ಬಿಟ್ಟು ಕರ್ಮಮಾಡು ಮೊದಲಿಗಾಗಲಿ, ಕಡೆಗಾಗಲಿ ಎಲ್ಲೂ ಫಲದಾಸೆ ಮಾಡಬೇಡ. ಇದಕ್ಕೆ ವಿನೋಬಾ ನೀಡುವ ಕಾರಣಗಳು ಈ ರೀತಿ ಇವೆ:

1. ಸಕಾಮಿಗೆ ಫಲಾಸಕ್ತಿಯಿಂದ ಆದರ ಕನಸು ಕಾಂಬುದರಲ್ಲಿ ಕಾಲ ನಷ್ಟ, ಶಕ್ತಿ ನಷ್ಟ ಸ್ವಲ್ಪಮಟ್ಟಿಗೆ ಆಗುತ್ತದೆ.

2. ಫಲೇಚ್ಛೆ ಇಲ್ಲದವನಿಗೆ ಕರ್ಮಮಾಡಲಿಕ್ಕೆ ಪ್ರತಿಕ್ಷಣವೂ ಸಿಗುತ್ತದೆ. ಹೊಳೆಗೆ ಬಿಡುವೆಲ್ಲಿ ? ಗಾಳಿಗೆ ತೆರವೆಲ್ಲಿ ? ಸೂರ್ಯನಿಗೆ ಸದಾ ಬೆಳಗುವುದೊಂದೇ ಗೊತ್ತು. ಅದೇ ರೀತಿ ನಿಷ್ಕಾಮ ಕರ್ಮಿಗೆ ಸದಾ ಸೇವೆ ಮಾಡುವುದೊಂದೇ ಗೊತ್ತು.

3. ನಿಷ್ಕಾಮ ಕರ್ಮದ ಮಾತನ್ನು ಬದಿಗೆ ಸರಿಸಿದರೂ ಕರ್ಮದಲ್ಲಿ ಇರುವ ಆನಂದ ಆದರ ಫಲದಲ್ಲಿ ಇಲ್ಲ.

4. ಕೆಲಸಕ್ಕೆ ಒಂದು ಸಾತ್ವಿಕ ಆನಂದವಿದೆ. ಆ ಆನಂದವೇ ಆ ಕರ್ಮದ ಮುಖ್ಯ ಫಲ.

5. ಮರಕ್ಕೆ ಹಣ್ಣುಂಟು. ಹಣ್ಣಿಗೇನು ಫಲವುಂಟು ?

ಲೋಕಕ್ಕೆ ಇದು ಒಪ್ಪಿಗೆಯಿಲ್ಲ. "ಬಾಳೆಯ ಹಣ್ಣನ್ನು ತಿನ್ನುವ ಭಾಗ್ಯ ವಿದ್ದು ಲೋಕ ಮೆಣಸಿನಕಾಯಿ ತಿನ್ನ ಬಯಸುತ್ತದೆ. ಹಾಗೆ ಮಾಡಬೇಡಿ, ಎನ್ನುತ್ತದೆ ಗೀತೆ. ಇದಕ್ಕೆ ವಿನೋಬಾ ಒಂದು ಸೊಗಸಾದ ಕಥೆ ಹೇಳುತ್ತಾರೆ: ಒಂದು ಸಲ ಒಬ್ಬ ಗೃಹಸ್ಥ ಒಬ್ಬ ಸಾಧುವಿನ ಬಳಿ ಹೋಗಿ ಮೋಕ್ಷಕ್ಕಾಗಿ

ಮನೆ ಬಿಡಲೇ ಬೇಕೆ ? ಎಂದ. 'ಸಾಧು ಹೇಳಿದ: 'ಯಾರು ಹೇಳಿದರು ? ಜನಕನಂಥವನು ಅರಮನೆಯಲ್ಲಿದ್ದೇ ಮೋಕ್ಷಗಳಿಸಿದನು. ನೀನೇಕೆ ಮನೆ ಬಿಡಬೇಕು. ಇನ್ನೊಬ್ಬ ಭೇಟಿಯಾಗಿ ಕೇಳಿದ–ಮನೆಬಿಡದಿದ್ದರೆ ಮೋಕ್ಷ ಸಿಗದೇ ? 'ಯಾರು' ಹೇಳಿದರು ? ಮನೆಯಲ್ಲೇ ಕುಳಿತು ಸುಖದಲ್ಲಿ ಮುಳುಗಿ ಮೋಕ್ಷ ಪಡೆಯುವುದಾದರೆ ಶುಕನೇನು ಹೆಡ್ಡನೇ ಮನೆ ಬಿಡಲಿಕ್ಕೆ ? ಈ ಇಬ್ಬರೂ ಗೃಹಸ್ಥರು ಒಂದೆಡೆ ಸೇರಿದರು. ಒಬ್ಬ ಹೇಳಿದ: 'ಮನೆ ಬಿಡಲಿಕ್ಕೆ ಹೇಳಿದರು ಸಾಧು'. ಇನ್ನೊಬ್ಬನೆಂದ 'ಮನೆ ಬಿಡಲಿಕ್ಕೆ ಅಗತ್ಯವಿಲ್ಲವೆಂದರು.' ಇಬ್ಬರೂ ಮತ್ತೆ ಸಾಧುವಿನ ಬಳಿಗೆ ಹೋದರು. ಆತ ಹೇಳಿದ: 'ಎರಡೂ ಸರಿ. ಅವರವರ ವೃತ್ತಿಯಂತೆ ಅವರವರ ದಾರಿ. ಅವರವರ ಪ್ರಶ್ನೆಯಂತೆ ಅವರವರಿಗೆ ಉತ್ತರ. ಮನೆ ಬಿಡಬೇಕಾಗಿಲ್ಲವೆಂಬುದೂ ನಿಜ. ಬಿಡಬೇಕೆಂಬುದೂ ನಿಜ. ಇದು 'ಊ' ಸಿದ್ಧಾಂತ. ಇದನ್ನು ವಿನೋಬಾ ಪುಂಡಲೀಕನ ಉದಾಹರಣೆ ನೀಡಿ "ಒಮ್ಮೆ ಸಾಧನೆ ನಿರ್ಧಾರವಾದ ಮೇಲೆ ಕಡೆತನಕ ಸಾಧನೆ ನಡೆಯಬೇಕು. ಸಾಧನೆ ನಡೆಯುತ್ತಿರುವಾಗ, ಕರ್ತವ್ಯ ಮಾಡುತ್ತಿರುವಾಗ, ದೇವರೇ ಇದಿರಿಗೆ ಬಂದರೂ ಸಾಧನೆ ಸಡಿಲಾಗಬಾರದು, ಕರ್ತವ್ಯ ಬಿಡಬಾರದು. ಮೈ ಇರುವುದು ಸಾಧನೆಗಾಗಿಯೇ. ದೇವರ ದರ್ಶನ ನಮ್ಮ ಕೈಯೊಳಗಿನ ಮಾತು. ಅದೆಲ್ಲಿ ಹೋದೀತು ?" ಎನ್ನುತ್ತಾರೆ.

ಕರ್ಮಯೋಗ

ನಿಷ್ಕಾಮ ಕರ್ಮಯೋಗಿಯ ಕರ್ಮ ವಿಶ್ವದೊಡನೆ ತಾನು ಸಮರಸವಾಗಿರುತ್ತದೆ. ಅಂಥವನು ಯಾವ ಸಮಾಜದಲ್ಲಿ ಇರುವನೋ ಅಲ್ಲಿ ಸುವ್ಯವಸ್ಥೆ, ಸಮೃದ್ಧಿ, ಸೌಮನಸ್ಯ ಇರುತ್ತದೆ. ಶ್ರೀಕೃಷ್ಣನೇ ಅಂಥ ಕರ್ಮಯೋಗಿ. ತಾ ಮಾಡಿದ ಪೂಜೆಗೆ ಪರಮೇಶ್ವರ ದರ್ಶನ ಬೇಡುತ್ತಾನೆ. ಕರ್ಮಯೋಗಿ ನಿಷ್ಕಾಮನಾಗಿ ಆಳವಾದ ಕರ್ಮಮಾಡಿ ಅದನ್ನೆಲ್ಲಾ ಈಶ್ವರಾರ್ಪಣ ಮಾಡುತ್ತಾನೆ. ಅವನು ಯಾವ ಫಲವನ್ನೂ ಅಪೇಕ್ಷಿಸದೆ ಎಲ್ಲ ಫಲ ಪಡೆದಾನು.

ನಮ್ಮಲ್ಲಿ ಪರಮಾರ್ಥದ ಬಗೆಗೆ ಹುಚ್ಚು ಹರಡಿದೆ. ಸಾಧಕ ಕೈ ಕಾಲು ಆಡಿಸಬಾರದು, ಏನೂ ಕೆಲಸ ಮಾಡಬಾರದು ಎಂದು ಲೋಕ ತಿಳಿಯುತ್ತದೆ. ವಿನೋಬಾ ಹೇಳುತ್ತಾರೆ. "ನೂಲು ತೆಗೆಯುವವನು, ಬಟ್ಟೆ ನೇಯುವವನು,

ಹೊಲ ಉಳುವವನು ಎಂಥ ಪರಮಾರ್ಥಿ ? ಅನ್ನುತ್ತಾರೆ. ಊಟ ಮಾಡುವವನು ಹೇಗೆ ಪರಮಾರ್ಥಿ, ಎಂದು ಮಾತ್ರ ಯಾವಾಗಲೂ ಕೇಳರು. ಕರ್ಮಯೋಗಿಯ ದೇವರೇನೋ ಕುದುರೆಯ ಮೈ ತಿಕ್ಕುತ್ತ ನಿಂತಿದ್ದಾನೆ. ರಾಜಸೂಯಯಾಗದಲ್ಲಿ ಕೈಯಲ್ಲಿ ಸಗಣಿ ಹಿಡಿದು ಎಂಜಲು ಬಳದಿದಾನೆ. ಕಾಡಿನಲ್ಲಿ ದನಗಳನ್ನು ಮೇಯಿಸುತ್ತಿದಾನೆ. ದ್ವಾರಕೆಯ ದೊರೆಯಾದರೂ ಗೋಕುಲಕ್ಕೆ ಹೋದರೆ ಕೊಳಲೂದುತ್ತಾ ದನಗಳನ್ನು ಮೇಯಿಸುತಿದಾನೆ. ಹೀಗೆ ಕುದುರೆ ತಿಕ್ಕುವ, ದನಕಾಯುವ, ರಥ ಹೊಡೆವ, ಸಗಣಿ ಬಳಿವ, ಕರ್ಮಯೋಗಿ ಪರಮೇಶ್ವರನನ್ನು ಶರಣರು ತಂದು ನಿಲ್ಲಿಸಿದಾರೆ. ಶರಣರೂ ಅಷ್ಟೆ. ಒಬ್ಬ ತಕ್ಕಡಿ ಹಿಡಿದ, ಒಬ್ಬ ಕ್ಷೌರ ಮಾಡಿದ–ಹೀಗೆ ಮುಕ್ತರಾದರು."

ಕರ್ಮಯೋಗ ಸುಲಭ. ಆದರೂ ಅದು ರಾಗ–ದ್ವೇಷಗಳಿಗೆ ಬೇಗ ತುತ್ತಾಗುತ್ತವೆ. ಅದು ಬೇಡ–ಇದು ಬೇಡ. ಈ ದ್ವಂದ್ವಗಳ ಕಾಟವಿದೆ. ಯಾವುದು ಬೇಕೋ ಅದರಲ್ಲಿ ಪ್ರೇಮ, ರಾಗ. ಯಾವುದು ಬೇಡವೋ ಆದರಲ್ಲಿ ದ್ವೇಷ ಅಥವಾ ಅಸಹ್ಯ. ಈ ರಾಗ–ದ್ವೇಷ ಮನುಷ್ಯನನ್ನು ಹರಿದು ತಿನ್ನುತ್ತಿದೆ. ವಿನೋಬಾ ಇದನ್ನು ಕುರಿತು ಹೇಳುವ ಮಾತು ಎಷ್ಟು ಮನನೀಯ : "ಕರ್ಮಯೋಗ ಎಷ್ಟು ಸೊಗಸು, ಎಷ್ಟು ರಮಣೀಯ, ಎಷ್ಟು ಅನಂತ ಫಲಪ್ರದವಾದುದು. ಆದರೆ ಈ ಕಾಮ, ಕ್ರೋಧ, ನಮ್ಮನ್ನು 'ಇದು ಹಿಡಿ, ಅದು ಬಿಡು' ಎಂಬ ಗೊಂದಲದಲ್ಲಿ ಸಿಕ್ಕಿಸಿ ಹಗಲಿರುಳು ಬೆನ್ನು ಹತ್ತುತ್ತದೆ. ಸ್ಥಿತಪ್ರಜ್ಞ ಸಂಯಮ ಮೂರ್ತಿ ಹೇಗೋ ಹಾಗೇ ಕರ್ಮಯೋಗಿಯೂ ಆಗಬೇಕು. ಮಾಡಿದರೂ ಮಾಡದಂತಿರಬೇಕು. ಮಾಡದಿದ್ದರೂ ಮಾಡಿದಂತಿರಬೇಕು. ಇದೇ ಕರ್ಮಯೋಗದ ವಿಶೇಷತೆ.

ಅವ್ಯಕ್ತೋಪಾಸನೆ

6, 7, 8 ನೆಯ ಅಧ್ಯಾಯಗಳು ಅಭ್ಯಾಸ, ವೈರಾಗ್ಯ, ಶ್ರದ್ಧೆ ಇವುಗಳನ್ನು ಕುರಿತು ಹೇಳುತ್ತವೆ. ವಿನೋಬಾ ಅವರ ಮಾತಿನಲ್ಲಿ 'ಅವ್ಯಕ್ತೋಪಾಸನೆ' ಎಂದು ಹೇಳಬಹುದು. ಇದನ್ನು 'ಧ್ಯಾನಮಾರ್ಗ' ಎನ್ನುತ್ತಾರೆ. ಇದಕ್ಕೆ ಆವಶ್ಯಕವಾದ ಅಂಶಗಳು ಮೂರು (1) ಚಿತ್ತದ ಏಕಾಗ್ರತೆ (2) ಬಾಳಿನ ಪರಿಮಿತತನ (3) ಸಾಮ್ಯದೃಷ್ಟಿ.

ಚಿತ್ತದ ಏಕಾಗ್ರತೆ ಹೇಗೆ ಸಾಧ್ಯ ? "ಭಯಾನಕ ಸಂಸಾರ ಹಗಲಿರುಳೂ ನಮ್ಮ ಸುತ್ತ ಹೊರಗೂ ಒಳಗೂ ತಿರುಗುತ್ತಿದೆ. ಪ್ರಾರ್ಥನೆ, ಭಜನೆಗಳೆರಡರಲ್ಲೂ ನಮ್ಮ ಉದ್ದೇಶ ಹೊರಗಿನದೇ. ಪರಮಾತ್ಮನಿಗಾಗಿ ಒಂದು ಕ್ಷಣವಾದರೂ ಸಂಸಾರವನ್ನು ಮರೆಯೋಣ ಎಂಬ ಭಾವನೆ ಶೂನ್ಯ. ಪ್ರಾರ್ಥನೆಯೂ ಒಂದು ಪ್ರದರ್ಶನ ಎನ್ನುವಂತಾಗಿದೆ. ನಮ್ಮ ಮನಸ್ಸಿನ ಸ್ಥಿತಿ. ಇಂಥಲ್ಲಿ ಆಸನ ಹಾಕಿದರೇನು ? ಕಣ್ಣು ಮುಚ್ಚಿಕೊಂಡರೇನು ? ಎಲ್ಲವೂ ವ್ಯರ್ಥ. ನಮ್ಮ ಮನಸ್ಸಿನ ಓಟ ಸದಾ ಹೊರಗೆ ಹರಿಯುತ್ತಿದ್ದರೆ ನಮ್ಮ ಸಾಮರ್ಥ್ಯವೆಲ್ಲವೂ ನಷ್ಟವಾಗುತ್ತದೆ. ಯಾವ ಬಗೆಯ ವ್ಯವಸ್ಥೆಯೂ, ನಿಯಂತ್ರಣ ಶಕ್ತಿಯೂ ಉಳಿಯುವುದಿಲ್ಲ. ಈ ವಿಷಯ ಈಗ ನಮ್ಮ ದೇಶದಲ್ಲಿ ಪದೇ ಪದೇ ಅನುಭವವಾಗುತ್ತಿದೆ.

ಕೇಳಲು ಕಥೆ ಪುರಾಣ ಸುನಿದ್ದೆ
ಮಲಗಿದರೆ ಮನವು ಚಿಂತೆಯ ಮುದ್ದೆ
ಗಹನ ಕರ್ಮಗತಿ ಏಕಳುತಿದ್ದೆ ?

ಎಂದರೆ, ಮನಸ್ಸಿನ ನಿಲುವನ್ನು ಬದಲಾಯಿಸದೆ ಏಕಾಗ್ರತೆ ಬರಲಾರದು. ಅದಕ್ಕಾಗಿ ಮನದ ನಿಲುವು ಶುದ್ಧವಾಗಿರಬೇಕು. ವ್ಯವಹಾರವೆಲ್ಲವೂ ಶುದ್ಧವಾಗಿರಬೇಕು. ವೈಯಕ್ತಿಕ ಲಾಭ, ವಾಸನಾತೃಪ್ತಿ ಇಂಥ ಬಾಹ್ಯ ವಿಷಯಗಳಿಗಾಗಿ ವ್ಯವಹಾರ ಮಾಡಬಾರದು."

ಇಂಥ ಚಿತ್ತೈಕಾಗ್ರತೆಗೆ ಇನ್ನೊಂದು ಅಂಶ ಬಾಳಿನ ಪರಿಮಿತತೆ ಎಂಬ ಭಾವನೆ. ಜೀವನ ಮಿತಿಯಲ್ಲಿ ಇರಬೇಕು. "ಕೆಟ್ಟವಸ್ತು ನೋಡಬೇಡಿ. ಕೆಟ್ಟ ಪುಸ್ತಕ ಓದಲೇಬೇಡಿ. ನಿಂದೆ-ಸ್ತುತಿಗಳಿಗೆ ಕಿವಿಗೊಡಬೇಡಿ. ದೋಷ ಪೂರ್ಣ ವಸ್ತು ಬೇಡವೇ ಬೇಡ. ದೋಷರಹಿತ ವಸ್ತುಗಳನ್ನೂ ಅತಿಯಾಗಿ ಸೇವಿಸಬೇಡಿ. ಉಚ್ಛೃಂಖಲವೃತ್ತಿ ಬೇಡವೇ ಬೇಡ ಸಾರಾಯಿ, ಭಜಿ ಬೇಡವೇಬೇಡ. ಬಾಳೆಯ ಹಣ್ಣು, ಮೋಸಂಬಿಗಳನ್ನು ಅತಿಯಾಗಿ ಬೇಡಬೇಡಿ. ಫಲಹಾರವೆಂದರೆ ಶುದ್ಧ ಆಹಾರ. ಅದೂ ಅಳತೆಗೆಡಬಾರದು. ನಾಲಗೆಯ ಸ್ವಚ್ಛಂದವೃತ್ತಿಯನ್ನು ಒಳಗಿನ ಒಡೆಯ ಸಹಿಸಲೇಬಾರದು. ತಪ್ಪುದಾರಿ ತುಳಿದರೆ ಒಳಗಿನ ಸ್ವಾಮಿ ಶಿಕ್ಷಿಸುವನೆಂದು ಇಂದ್ರಿಯಗಳಿಗೆ ಭಯವಿರಬೇಕು. ಬಾಳಿನಲ್ಲಿ ಪರಿಮಿತತನ ಎಂದರೆ ನಿಯಮಿತ ಆಚರಣೆ."

ಮೂರನೆಯ ದೃಷ್ಟಿ ಸಾಮ್ಯದೃಷ್ಟಿ ಅಥವಾ ಸಮದೃಷ್ಟಿ. ಇದು ಶುಭ ದೃಷ್ಟಿ. ಮಂಗಳದೃಷ್ಟಿ. ಈ ದೃಷ್ಟಿ ಮಂಗಳಕರ. ಶುಭವಾದುದು. ಎಂಬ ಭಾವನೆ, ಇದಕ್ಕೆ ವಿನೋಬಾ ಹೇಳುವ ಕಥೆ ಕೇಳಿ. –"ರಾಮದಾಸರು ರಾಮಾಯಣ ಬರೆದು ಶಿಷ್ಯರಿಗೆ ಓದಿ ಹೇಳುತ್ತಿದ್ದರು. ಅದನ್ನು ಕೇಳಲು ಮಾರುತಿಯೂ ಬರುತ್ತಿದ್ದ. ಮಾರುತಿ ಅಶೋಕ ವನಕ್ಕೆ ಹೋದ ಅಲ್ಲಿ ಆತ ಬಿಳೀ ಹೂವನ್ನು ಕಂಡ." ಎಂದುಸಮರ್ಥರು ಬರೆದರು. ಅದನ್ನು ಕೇಳಿದೊಡನೆ ಮಾರುತಿ ಪ್ರಕಟನಾದ. 'ಬಿಳೀ ಹೂ ನಾ ನೋಡಲೇ ಇಲ್ಲ. ನಾ ನೋಡಿದ ಹೂ ಕೆಂಪಗಿದ್ದವು. ನೀವು ಬರೆದುದು ತಪ್ಪು. ಅದನ್ನು ತಿದ್ದಿ ಕೊಳ್ಳಿ' ಎಂದ. 'ನೀನು ಬಿಳಿಯ ಹೂವನ್ನೇ ಕಂಡದ್ದು' ಎಂದರು. ಸಮರ್ಥರು ಮಾರುತಿ 'ನಾನು ಸುಳ್ಳು ಹೇಳುತ್ತೇನೆಯೆ ? ಸ್ವತಃ ನಾನೇ ಅಲ್ಲಿಗೆ ಹೋದುದು' ಎಂದ. ಕಡೆಗೆ ದೂರು ಶ್ರೀರಾಮನ ಬಳಿಗೆ ಹೋಯಿತು. ರಾಮಚಂದ್ರ 'ಹೂಗಳೇನೋ ಬಿಳಿಯವೇ. ಮಾರುತಿಯ ಕಣ್ಣು ಆಗಮಾತ್ರ ಕೋಪದಿಂದ ಕೆಂಪಾಗಿತ್ತು. ಆದರಿಂದ ಆ ಬಿಳೀ ಹೂ ಅವನಿಗೆ ಕೆಂಪಾಗಿ ಕಂಡವು. ಈ ಸುಂದರ ಕಥೆಯ ಅರ್ಥ ಇಷ್ಟೇ. ನಾವು ಯಾವ ದೃಷ್ಟಿಯಿಂದ ನೋಡುತ್ತೇವೋ ಹಾಗೆ ಲೋಕ ನಮಗೆ ಕಾಣಿಸುತ್ತದೆ." ಈ ಸೃಷ್ಟಿ ಶುಭ ವಾದುದೆಂದು ಮನಸ್ಸಿಗೆ ನಂಬಿಕೆಯಾಗದಿದ್ದರೆ ಚಿತ್ತದ ಏಕಾಗ್ರತೆ ಬರಲಾರದು. ಶುಭ ದೃಷ್ಟಿಯೇ ಇದಕ್ಕೆ ಉತ್ತಮವಾದ ದಾರಿ. ಎಲ್ಲೆಲ್ಲಿಯೂ ಮಂಗಳವನ್ನೇ ನೋಡಿ. ಆಗ ಚಿತ್ತ ತಾನಾಗಿಯೇ ಶಾಂತವಾದೀತು.

ಇವುಗಳ ಜೊತೆಗೆ ಅವ್ಯಕ್ತೋಪಾಸನೆಗೆ ಇನ್ನೂ ಎರಡು ಸಾಧನೆಗಳು ಆವಶ್ಯಕ. ಅವು ಅಭ್ಯಾಸ, ವೈರಾಗ್ಯ, ಅಭ್ಯಾಸ ಸಕ್ರಿಯಾತ್ಮಕವಾದುದು; ವೈರಾಗ್ಯ ನಿಷೇಧಾತ್ಮಕವಾದುದು. ಇದರ ಅರ್ಥ ಒಂದು ವಿಧಾಯಕ. ಇನ್ನೊಂದು ಒಂದು ವಿಧದಲ್ಲಿ ವಿಧ್ವಂಸಕ. ವಿನೋಬಾ ಎಷ್ಟು ಸಮಂಜಸವಾಗಿ ಇದನ್ನು ವಿವರಿಸುತ್ತಾರೆ. 'ಹೊಲದಲ್ಲಿರುವ ಹುಲ್ಲು ಕೊಯ್ದು ಬಿಸಾಡುವುದು ವಿಧ್ವಂಸಕ ಕೆಲಸ. ಅದಕ್ಕೇ ವೈರಾಗ್ಯವೆನ್ನುವುದು. ಮನಸ್ಸಿನಲ್ಲಿ ಸದ್ವಿಚಾರ ಗಳನ್ನು ಕುರಿತು ಮತ್ತೆ ಮತ್ತೆ ಯೋಚಿಸುವುದು ಅಭ್ಯಾಸ." ಈ ಸದ್ವಿಚಾರ ಗಳಲ್ಲಿ ಸವಿ ಬಾಹ್ಯವೇ ? ಆತ್ಮವೇ ? ವಿನೋಬಾಜಿಯ ಮಾತನ್ನು ಕೇಳಿ : "ಮಾವಿನ ಹಣ್ಣನ್ನು ರುಚಿ ಎನ್ನುತ್ತೇವೆ. ರುಚಿ ಇರುವುದು ಕೇವಲ ಆ ಹಣ್ಣ

ನಲ್ಲೇನು ? ಅಲ್ಲ, ನಮ್ಮ ಆತ್ಮದಲ್ಲಿರುವ ರುಚಿಯನ್ನು, ಸವಿಯನ್ನು ಆ ವಸ್ತುವಿನಲ್ಲಿ ಬೆರೆಸುತ್ತೇವೆ. ಆದುದರಿಂದ ಒಳಗಿನ ಸವಿಯನ್ನು ಅನುಭವಿಸಲು ಕಲಿಯಿರಿ. ಕೇವಲ ಬಾಹ್ಯವಸ್ತುಗಳಲ್ಲಿ ಸವಿಯಿಲ್ಲ. ಮಾಧುರ್ಯಸಾಗರವಾದ ಆ 'ರಸಾನಾಂ ರಸತಮಃ' ಆತ್ಮ ನಮ್ಮ ಹತ್ತಿರ ಇದೆ ಎಂಬ ಭಾವನೆ ಬೆಳೆದಂತೆಲ್ಲಾ ವೈರಾಗ್ಯ ಮೊಳೆಯುತ್ತದೆ. ಸೀತಾದೇವಿ ಮಾರುತಿಗೆ ಮುತ್ತಿನಹಾರ ಕೊಟ್ಟಳು. ಆ ಮುತ್ತುಗಳನ್ನು ಕಚ್ಚಿನೋಡಿ ಬಿಸಾಡಿಬಿಟ್ಟ. ಮುತ್ತುಗಳಲ್ಲಿ ಮಾರುತಿಗೆ ರಾಮ ಕಾಣಿಸಲಿಲ್ಲ. ರಾಮ ಆತನ ಹೃದಯದಲ್ಲಿದ್ದ. ಆ ಮುತ್ತುಗಳಿಗೆ ಮೂರ್ಖರು ಲಕ್ಷ ರೂಪಾಯಿ ಕೊಡುತ್ತಿದ್ದರು.

ಇದು ಅವ್ಯಕ್ತೋಪಾಸನೆ ಎನಿಸಿದ ಧ್ಯಾನಯೋಗದ ತಿರುಳು.

ರಾಜವಿದ್ಯೆ

9, 10, 11, 12 ನೆಯ ಅಧ್ಯಾಯಗಳು ರಾಜವಿದ್ಯೆ ಅಥವಾ ಅವ್ಯಕ್ತೋಪಾಸನೆಗೆ ವಿರೋಧವಾಗದ ವ್ಯಕ್ತೋಪಾಸನೆ. ಇದಕ್ಕೆ ಇನ್ನೊಂದು ಹೆಸರು ಭಕ್ತಿಯೋಗ.

9 ನೆಯ ಅಧ್ಯಾಯದಲ್ಲಿ ಕರ್ಮಯೋಗ, ಭಕ್ತಿಯೋಗಗಳ ಮಧುರ ಮಿಲನವಿದೆ, ಕರ್ಮಮಾಡಿಯೂ ಫಲದ ತ್ಯಾಗಮಾಡುವುದು ಕರ್ಮಯೋಗ. ಫಲದ ವಾಸನೆಯಿಲ್ಲದಂತೆ ಕೌಶಲದಿಂದ ಕರ್ಮಮಾಡಬೇಕು. ವಿನೋಬಾ ಹೇಳುತ್ತಾರೆ. "ಇದು ಅಖರೋಡ್ ಗಿಡ ನೆಟ್ಟಂತೆ. 25 ವರ್ಷದ ಮೇಲೆ ಹಣ್ಣು ಬಿಡುತ್ತದೆ. ನಮ್ಮ ಜೀವನದಲ್ಲಿ ಆ ಹಣ್ಣು ಸಿಗದೆ ಹೋದೀತು. ಆದರೂ ಗಿಡ ನೆಡು, ಅಕ್ಕರೆಯಿಂದ ನೀರೆರೆ. ಗಿಡ ನೆಡು, ಹಣ್ಣಿನಾಶೆಬಿಡು. ಇದು ಕರ್ಮಯೋಗ. ಭಾವಪೂರಿತವಾಗಿ ಈಶ್ವರನೊಂದಿಗೆ ಒಂದುಗೂಡುವುದು ಭಕ್ತಿ. ಕರ್ಮಯೋಗ-ಭಕ್ತಿಯೋಗಗಳು ಒಂದೆಡೆ ಸೇರುವುದು ರಾಜಯೋಗದಲ್ಲಿ.

"ಕರ್ಮಮಾಡಿದರೆ ಬಂದ ಫಲವನ್ನು ಎಸೆಯುವಂತಿಲ್ಲ. ಅದನ್ನು ದೇವರಿಗೆ ಅರ್ಪಿಸುವುದು, ಫಲದ ವಿನಿಯೋಗ ಚಿತ್ತಶುದ್ಧಿಗೆ ದಾರಿಯಾಗಬೇಕು. ಯಾವ ಕಾಯಕ ಹೇಗೆ ಆಗುತ್ತದೋ ಹಾಗೇ ಅದನ್ನು ಭಗವಂತನಿಗೆ ನೀಡು. ಪ್ರತ್ಯಕ್ಷ ಕ್ರಿಯೆ ನಡೆಯುತ್ತಿದ್ದಂತೆ ಅದನ್ನು ದೇವರಿಗರ್ಪಿಸಿ ಮನದ

ಪುಷ್ಟಿ ದೊರಕಿಸಬೇಕು.... ಇಂದ್ರಿಯಗಳೂ ಸಾಧನೆಗಳೇ, ಅದನ್ನು ಈಶ್ವರನಿಗರ್ಪಿಸು. ಅವುಗಳೇನು ನಿಮ್ಮ ಶತ್ರುಗಳಲ್ಲ, ಒಳ್ಳೆಯವೇ. ಅವುಗಳ ಶಕ್ತಿಯೂ ದೊಡ್ಡದು. ಪ್ರತಿಯೊಂದು ಇಂದ್ರಿಯವನ್ನೂ ಈಶ್ವರಾರ್ಪಣ ಬುದ್ಧಿಯಿಂದ ಉಪಯೋಗಿಸುವುದು ರಾಜಮಾರ್ಗ. ಇದೇ ರಾಜಯೋಗ."

ಮಾನವರೊಳಗೆ ದೇವರಿದ್ದಾನೆ. ಸೃಷ್ಟಿಯೆಲ್ಲ ಭ ಗ ವ ಂ ತ ನ ವ್ಯಕ್ತ ಸ್ವರೂಪ. ತಂದೆ-ತಾಯಿ, ಗುರು ಇವರಲ್ಲಿ ದೇವರನ್ನು ಗುರುತಿಸಿದರೆ ಬಹು ಸೊಗಸು. ಈ ಭಾವನೆಯನ್ನು ವಾಚಕರ ಮುಂದಿಡುವಾಗ ವಿನೋಬಾ ಕವಿಯಂತಾಗುತ್ತಾರೆ. ಅವರ ಭಾಷೆ ಕಾವ್ಯಮಯವಾಗುತ್ತದೆ. ಮೊದಲು ಮೊದಲು ಮಾನವನ ಸೌಮ್ಯತಮ ರೂಪದಲ್ಲಿ, ಪಾವನ ಮೂರ್ತಿಗಳಲ್ಲಿ ಪರಮಾತ್ಮನನ್ನು ಕಾಣಲು ಯತ್ನಿಸೋಣ. ಹಾಗೆಯೇ ಸೃಷ್ಟಿಯಲ್ಲಿನ ವಿಶಾಲ ಮನೋಹರ ರೂಪಗಳಲ್ಲಿ ಮೊದಲು ಆತನನ್ನು ಕಾಣಲು ಯತ್ನಿಸಬೇಕು. ಉಷಃಕಾಲ, ಸೂರ್ಯ, ಪಾವನಗಂಗೆ, ಗಾಳಿ, ಅಗ್ನಿ ಕುದುರೆ, ಹಸು, ಅನಂತ ಸಮುದ್ರ, ಸಿಂಹ, ಹುಲಿ, ಹಾವು, ಒಂದೇ ಎರಡೇ ಈ ವ್ಯಕ್ತ ವಿಶ್ವವೆಲ್ಲ; ನಕ್ಷತ್ರಗಳು, ಆಕಾಶ, ಅವಕಾಶ ಎಲ್ಲದರಲ್ಲೂ ಅವನನ್ನೇ ಕಾಣಬೇಕು. ಎಲ್ಲವನ್ನೂ ಹರಿಮಯ ಮಾಡಿಬಿಡಬೇಕು. ಒಟ್ಟಿನಲ್ಲಿ "ಸ್ಥೂಲ-ಸೂಕ್ಷ್ಮ, ಸರಳ-ಮಿಶ್ರ, ಸರಳಅಕ್ಷರ ಸಂಯುಕ್ತಾಕ್ಷರ ಎಲ್ಲವನ್ನೂ ಕಲಿಯಿರಿ. ಕಡೆಗೆ ಪರಮಾತ್ಮನಿಲ್ಲದ ಸ್ಥಳ ಯಾವುದೂ ಇಲ್ಲ ಎಂಬುದನ್ನು ಅನುಭವಿಸಿರಿ. ಅಣುರೇಣುಗಳಲ್ಲಿ ಆತನೇ. ಇರುವೆಯಿಂದ ಮೊದಲಾಗಿ ಬ್ರಹ್ಮಾಂಡದವರೆಗೂ ಆತ ತುಂಬಿಕೊಂಡಿದಾನೆ. ಎಲ್ಲರ ಯೋಗಕ್ಷೇಮವನ್ನು ಸದಾ ನೋಡುವ ಕೃಪಾಳು ಜ್ಞಾನಮೂರ್ತಿ, ವತ್ಸಲ, ಸಮರ್ಥ, ಪಾವನ, ಸುಂದರ, ಪರಮಾತ್ಮ ನಮ್ಮ ಸುತ್ತ ಎಲ್ಲೆಲ್ಲಿಯೂ ವ್ಯಾಪಿಸಿದಾನೆ."

ಇವೆಲ್ಲ 10 ಮತ್ತು 11 ನೆಯ ಅಧ್ಯಾಯಗಳಲ್ಲಿ ಬರುವ ವಿಷಯ. ಇದರ ಸೊಗಸನ್ನು ಸವಿಯಲು ಮೂಲಗ್ರಂಥ ರಸದ ಸಾಗರ. ರತ್ನದ ಗಣಿ. ಅದರಲ್ಲಿ ಕಾಣಸಿಗುವ ವರ್ಣನೆ ಚೇತೋಹಾರಿ, ಹೃದಯಂಗಮ.

12 ನೆಯ ಅಧ್ಯಾಯದಲ್ಲಿ ಭಕ್ತನ ವರ್ಣನೆ ಬರುತ್ತದೆ. ಅವನಲ್ಲಿ ಕಂಡು ಬರುವ ಲಕ್ಷಣಗಳೇನು ? 20 ಶ್ಲೋಕಗಳ ಈ ಪುಟ್ಟ ಅಧ್ಯಾಯ ಓದಲು ಕೇಳಲು ಬಹು ಚಂದ. ನಾನು ಭಕ್ತನಾಗಬೇಕು ಎಂದರೇನು ? ವಿನೋಬಾ

ಮಾತಿನಲ್ಲಿ. "ನನ್ನ ಬದುಕಿನ ಕತ್ತಿ ಈಶ್ವರನ ಕೈಯಲ್ಲಿ ಝಳಪಿಸಬೇಕು." ಇದು ಆಗುವುದು ಹೇಗೆ ? "ಭಕ್ತ ಲೋಕದಲ್ಲಿ ಯಾರೊಂದಿಗೂ ವೈರವಿಲ್ಲದವ. ತಟಸ್ಥನಾಗಿದ್ದುಕೊಂಡು ನಿರಪೇಕ್ಷ ಬುದ್ಧಿಯಿಂದ ಜಗತ್ತಿನ ಸೇವೆ ಮಾಡುವವ ಮಾಡಿದುದನ್ನೆಲ್ಲಾ ಅರ್ಪಿಸುವವ. ನನ್ನಭಕ್ತಿಯಿಂದ ತುಂಬಿದವ, ಕ್ಷಮಾವಂತ, ನಿಃಸಂಗ, ವಿರಕ್ತ, ಪ್ರೇಮಲ ಭಕ್ತ-ಇಂಥವನು ಪರಮಾತ್ಮನ ಕೈಯಲ್ಲಿನ ಆಯುಧವಾಗುತ್ತಾನೆ. ಇದೇ ಆ ಸಾರಸರ್ವಸ್ವ"

ಸಗುಣ—ನಿರ್ಗುಣ ಉಪಾಸನೆ

ಉಪಾಸಕರಲ್ಲಿ ಎರಡು ಬಗೆ. ಅವ್ಯಕ್ತೋಪಾಸಕ, ವ್ಯಕ್ತೋಪಾಸಕ ಇವರನ್ನು ನಿರ್ಗುಣ ಉಪಾಸಕರೆಂದೂ, ಸಗುಣ ಉಪಾಸಕರೆಂದೂ ಕರೆಯು ವುದು ವಾಡಿಕೆ. ಹಿಂದಿನ ಪ್ರಕರಣಗಳಲ್ಲಿ ಈ ಎರಡು ಬಗೆಯ ಉಪಾಸನೆಯ ಬಗೆಗೆ ಸೂಕ್ಷ್ಮವಾಗಿ ಹೇಳಲಾಗಿದೆ.

ವ್ಯಕ್ತದ ಉಪಾಸನೆ ಅವ್ಯಕ್ತಕ್ಕೆ ಅವಿರೋಧಿಯಾಗಿರಬೇಕು. ಸಗುಣ, ನಿರ್ಗುಣಕ್ಕೆ ಸೋಪಾನವಾಗಬೇಕು. ಒಂದು ಉದಾಹರಣೆ ನೋಡಿ. ಕಟ್ಟಡದ ಗೋಡೆ ಕಟ್ಟುವಾಗ ಸಾರುವೆ ಹಾಕುವುದು ವಾಡಿಕೆ. ಕಟ್ಟಡ ಕಟ್ಟಿ ಮುಗಿದ ಮೇಲೆ ಅದನ್ನು ತೆಗೆದುಹಾಕುತ್ತೇವೆ. ಆದರೆ ಯಾವಾಗ ಕಟ್ಟಬೇಕಾದರೂ ಸಾರುವೆ ಹಾಕಿಕೊಳ್ಳುತ್ತೇವೆ. ಇದು ಸಾರ್ವತ್ರಿಕ ನಿಯಮ. ಎರಡೂ ಪೂರಕ. ಇನ್ನೊಂದು ಉದಾಹರಣೆ. ಮಗುವಿಗೆ ಅಕ್ಷರ ಕಲಿಸುವಾಗ ಅದನ್ನು ತಿದ್ದಿ ಅಭ್ಯಾಸ ಮಾಡಿಸುತ್ತೇವೆ. ಒಮ್ಮೆ ಅಕ್ಷರದ ಆಕಾರ ಚಿತ್ತದಲ್ಲಿ, ಅವ್ಯಕ್ತದಲ್ಲಿ ನಿಂತಿತೋ ಆಗ ಮತ್ತೆ ತಿದ್ದಿಸುತ್ತೇವೆಯೇ ?

ವಿನೋಬಾ ಅನ್ನುತ್ತಾರೆ. "ಸಗುಣ ಸುಲಭವಾದರೆ, ನಿರ್ಗುಣ ಕಠಿಣ. ಹಾಗೆ ಸಗುಣವೂ ಕಠಿಣ. ನಿರ್ಗುಣವೂ ಸುಲಭ. ಎರಡರಿಂದಲೂ ದೊರೆ ಯುವ ಧ್ಯೇಯವೊಂದೇ......ಯೋಗ, ಸಂನ್ಯಾಸ, ಸಗುಣ, ನಿರ್ಗುಣ ಎಲ್ಲವೂ ಒಂದೇ. ಕೊನೆಗೆ ಭಗವಂತ ಹೇಳಿದ. "ಅರ್ಜುನಾ, ನೀನು ಸಗುಣವೇ ಆಗಿರು, ನಿರ್ಗುಣನೇ ಆಗಿರು. ಭಕ್ತನಾಗಿದ್ದರೆ ಸಾಕು. ಗುಂಡು ಕಲ್ಲು ಆಗಬೇಡ"

ಒಟ್ಟಿನಲ್ಲಿ ಸಗುಣ, ನಿರ್ಗುಣಗಳು ಬರಿಯ ದೃಷ್ಟಿಭೇದ ಯಾವ ಬಗೆಯ ಉಪಾಸನೆಯೇ ಆಗಲಿ ಪರಮಾತ್ಮ ಸಾಧನೆಯೇ ಮುಖ್ಯ.

ಜ್ಞಾನಯೋಗ

ಭಗವಂತ ಮುಂದೆ ಸಾಗಿ ಜ್ಞಾನಯೋಗವನ್ನು ಹೇಳುತ್ತಾನೆ. ಇದು ಪ್ರಧಾನವಾಗಿ ವಿಚಾರ, ವಿವೇಕಗಳಲ್ಲಿ ಕಂಡು ಬರಬೇಕು. ಇದು 13, 14 ಮತ್ತು 15 ನೆಯ ಅಧ್ಯಾಯಗಳ ವಿಷಯ. ಇದು ವಿಚಾರ ಮಾಡಿ ತಿಳಿದು ಕೊಳ್ಳಬೇಕಾದ ಅಂಶ. ವಿನೋಬಾ ಹೇಳುತ್ತಾರೆ. "ಬಾಹ್ಯಫಲ ಕರ್ಮದ ಶರೀರ. ಕರ್ಮದಿಂದ ಉಂಟಾಗುವ ಚಿತ್ತಶುದ್ಧಿ ಅದರ ಆತ್ಮ. ಸ್ವಧರ್ಮಾ ಚರಣೆಯ ಫಲವಾದ ಶರೀರವನ್ನು ಬಿಸುಟು, ಒಳಗಿನ ಚಿತ್ತಶುದ್ಧಿರೂಪವಾದ ಸಾರಭೂತ ಆತ್ಮವನ್ನು ಸ್ವೀಕರಿಸಬೇಕು. ಹೀಗೆ ನೋಡುವ ಅಭ್ಯಾಸ, ದೇಹ ವನ್ನು ದೂರಗೊಳಿಸಿ ಪ್ರತಿಯೊಂದು ವಸ್ತುವಿನಲ್ಲಿನ ಸತ್ಯವನ್ನು ಸ್ವೀಕರಿಸುವ ಸಾರಗ್ರಾಹಿ ದೃಷ್ಟಿ ನಮಗೆ ಬರಬೇಕು. ಕಣ್ಣು, ಮನಸ್ಸು, ವಿಚಾರಗಳಿಗೆ ಈ ಬಗೆಯ ಶಿಕ್ಷಣ, ಅಭ್ಯಾಸ ದೊರೆಯಬೇಕು. ಪ್ರತಿಯೊಂದರಲ್ಲಿ ದೇಹವನ್ನು ದೂರಗೊಳಿಸಿ ಆತ್ಮವನ್ನು ಪೂಜಿಸಬೇಕು.'

ಈ ವಿವೇಚನೆಯೇ 13 ನೆಯ ಅಧ್ಯಾಯದಲ್ಲಿ ಬಂದಿದೆ. ವಿಚಾರ, ವಿವೇಕಗಳಿಂದ ಜ್ಞಾನಲಭ್ಯ. ಆ ಜ್ಞಾನ ಯಾವುದು ? ದೇಹವೇ ? ದೇಹ ದಲ್ಲಿರುವ ಆತ್ಮವೇ ? ದೇಹದ ಎಲ್ಲ ಆಟಗಳಿಗೂ ಆತ್ಮವೇ ಕಾರಣ ಎಂಬ ತಿಳುವಳಿಕೆ, ಶಿಕ್ಷಣ ಬೇಕು. ದೇಹವೇ ಸರ್ವಸ್ವ ಎಂದು ತಿಳಿದರೆ ಅದರಿಂದ ಬಹಳ ಪ್ರಮಾದ. ಇಂದಿನ ಶಿಕ್ಷಣದಿಂದ ಆಗಿರುವ ಪ್ರಮಾದವೇ ಅದು. ವಿನೋಬಾ ಹೇಳುತ್ತಾರೆ. "ಬಾಳಿಗೂ ಅಧ್ಯಾತ್ಮ ವಿದ್ಯೆಗೂ ಸಂಬಂಧವಿಲ್ಲ ವೆಂದು ಅನೇಕರಿಗೆ ಅನಿಸುತ್ತದೆ. ಈ ಬಗೆಯ ಸಂಬಂಧವಿದ್ದರೂ ಸಹ ಇರಬಾರದೆಂದು ಹಲವರ ವಿಚಾರ. ದೇಹದಿಂದ ಆತ್ಮವನ್ನು ಬೇರ್ಪಡಿಸಬೇಕೆಂಬ ಶಿಕ್ಷಣವನ್ನು ಬಾಲ್ಯದಿಂದಲೂ ಕೊಡಿಸುವ ಯೋಜನೆ ನಡೆದಲ್ಲಿ ಬಹಳ ಒಳ್ಳೆಯದಾದೀತು. ಇದು ಒಂದು ಶಿಕ್ಷಣದ ವಿಷಯ. ಈಚೆಗೆ ಕುಶಿಕ್ಷಣದಿಂದ ಕೆಟ್ಟಪರಿಣಾಮಗಳು ಆಗುತ್ತಿವೆ. ನಾನು 'ದೇಹರೂಪ ಎಂಬ ಭಾವದಿಂದ ಈ ಶಿಕ್ಷಣ ನಮ್ಮನ್ನು ಹೊರಗೆ ತರುತ್ತಿಲ್ಲ. ಎಲ್ಲೆಲ್ಲೂ ದೇಹದ ವಿಜೃಂಭಣೆಯೇ ! ಆದರ ಉಪಾಸನೆ ಎಷ್ಟು ನಡೆದರೂ ಈ ದೇಹಕ್ಕೆ ಬರ ಬೇಕಾದ ಸ್ವರೂಪ, ಅದಕ್ಕೆ ಕೊಡಬೇಕಾದ ಸ್ವರೂಪ ಎಲ್ಲೂ ಕಾಣಿಸದು. ಈ

ರೀತಿಯ ವ್ಯರ್ಥಪೂಜೆ ನಡೆದಿದೆ ಈ ದೇಹದ್ದು. ಆತ್ಮದ ಸೊಗಸಿನ ಕಡೆ ಗಮನವೇ ಇಲ್ಲ. ಈ ಸ್ಥಿತಿ ಬಂದದು ಶಿಕ್ಷಣದಿಂದ. ದೇಹದ ಮುಂದಾಸನ ನೀಡುವ ರೂಢಿಯನ್ನು ಹಗಲಿರುಳೂ ಕಲಿಸಲಾಗುತ್ತಿದೆ."

ದೇಹ ಒಂದು ಸಾಧನ ಮಾತ್ರ. "ನಾನು" ಎಂಬುದು ಯಾರು ? ಈ ದೇಹವಂತೂ ಅಲ್ಲ, ಅದು ಈ ದೇಹದಿಂದ ಭಿನ್ನ. "ಅದು ಅತ್ಯಂತ ಸುಂದರ ಸೋಜ್ವಲ, ಪವಿತ್ರ, ಅವ್ಯಂಗ ಆಗಿದೆ." ವ್ಯಕ್ತಿ ತನ್ನ ದೋಷಗಳನ್ನು ದೂರ ಗೊಳಿಸಲು ಆತ್ಮಪರೀಕ್ಷೆ ನಡೆಸಿದಾಗ ದೇಹವನ್ನು ತನ್ನಿಂದ ಬೇರ್ಪಡಿಸಿಯೇ ಪರೀಕ್ಷೆಗೆ ತೊಡಗುತ್ತಾನೆ. ಯಾರಾದರೂ ತನ್ನ ದೋಷವನ್ನೆತ್ತಿ ತೋರಿಸಿದರೆ ಆತನಿಗೆ ಕೋಪ ಬರುವುದಿಲ್ಲ. ಕೋಪಿಸಿಕೊಳ್ಳದೆ ಆತ ಈ ಶರೀರರೂಪಿ ಮನೋರೂಪೀ ಯಂತ್ರದಲ್ಲಿ ಏನಾದರೂ ದೋಷವಿದೆಯೇ ಎಂಬ ವಿಚಾರ ದಲ್ಲಿ ತೊಡಗಿ ಅದನ್ನು ದೂರಗೊಳಿಸಲೆತ್ನಿಸುತ್ತಾನೆ. ದೇಹವನ್ನು ತನ್ನಿಂದ ಪ್ರತ್ಯೇಕಿಸಿಕೊಳ್ಳಲಾರದವನಿಗೆ ಸುಧಾರಣೆಯೇ ಅಸಾಧ್ಯ—"ನಾನು ಸ್ವಾಮಿ, ನಾನು ಒಡೆಯ, ಈ ದೇಹವನ್ನು ದುಡಿಸಿಕೊಳ್ಳುವವನೂ ಅದರಿಂದ ಉತ್ತಮ ಸೇವೆ ಪಡೆಯುವವನೂ ಆಗಿದ್ದೇನೆ." ಹೀಗೆ ದೇಹದಿಂದ ಪ್ರತ್ಯೇಕ ವಾಗಿರುವ ಪ್ರವೃತ್ತಿಯನ್ನು ಬಾಲ್ಯದಿಂದಲೂ ಕಲಿಸಬೇಕು. ಇಂಥ ವಿಚಾರ ಜನಿಸಿದ ಜ್ಞಾನವೇ ನಿಜವಾದ ಜ್ಞಾನ.

ಈ ಬುದ್ಧಿ ಬಂದರೆ ಅದೇ ವಿವೇಕ. ನಾವು ದೇಹವನ್ನು ಸಿಂಗರಿಸುವ ಆಸಕ್ತಿ , ಉಂಟಾಗಲಿಕ್ಕಿಲ್ಲ. ಇಂಥ ಆತ್ಮ-ದೇಹ ವಿಚಾರದಿಂದ ಜನಿಸಿದ ಜ್ಞಾನವೇ ವಿವೇಕಕ್ಕೆ ಕಾರಣ. ಆದರಿಂದ ನಿಜವಾದ ದೇಹದ ಸೊಗಸು ಬರುತ್ತದೆ.

ದೇಹದಿಂದ ನಾನು ಬೇರೆ ಎಂಬ ವಿಷಯ ಲಕ್ಷ್ಯದಲ್ಲಿ ಬರುವ ತನಕ ನಾವು ಗುಲಾಮರೇ. ಇತರರ ದಬ್ಬಾಳಿಕೆಗೆ ಗುರಿ. ವಿನೋಬಾ ಒಂದು ಸೊಗಸಾದ ಕಥೆ ಹೇಳುತ್ತಾರೆ. ಒಬ್ಬ ರಾಕ್ಷಸನಿದ್ದ, ಅವನು ಒಬ್ಬ ಮನುಷ್ಯ ನನ್ನು ಹಿಡಿದಿದ್ದ. ಆ ಮನುಷ್ಯನಿಂದ ಸತತವಾಗಿ ಕೆಲಸಮಾಡಿಸಿಕೊಳ್ಳುತ್ತಿದ್ದ. ಆತ ಕೆಲಸ ಮಾಡದಿದ್ದರೆ 'ತಿಂದು ಬಿಟ್ಟೇನು', ನಿನ್ನನ್ನು ನುಚ್ಚು ನೂರು ಮಾಡಿಬಿಟ್ಟೇನು ಎಂದು ಬೆದರಿಸುತ್ತಿದ್ದ. ಮೊದಲು ಮೊದಲು ಆ ಮನುಷ್ಯ ಭಯಪಡುತ್ತಿದ್ದ. ಬರುಬರುತ್ತಾ ಪೀಡನೆ ಹೆಚ್ಚಿದ ಹಾಗೆಲ್ಲ ಆತ ತಿಂದು

ಬಿಡು ಎಂದ. ಆದರೆ ಆ ರಾಕ್ಷಸನೇನು ತಿನ್ನುವನು ? ಅವನಿಗೆ ಬೇಕಿದ್ದುದು ಒಬ್ಬ ಗುಲಾಮ. ಅವನನ್ನು ತಿಂದು ಬಿಟ್ಟರೆ, ಕೆಲಸಮಾಡುವವರು ಯಾರು? ಪ್ರತಿಸಲವೂ ಅವನು ಹೆದರಿಸುತ್ತಿದ್ದ. ಆದರೆ ತಿನ್ನು ಎಂದು ಉತ್ತರ ಬಂದ ಕೂಡಲೇ ಅವನ ಜುಲುಮೆ ನಿಂತಿತು. ಈ ದೇಹದ ಮೇಲಿನ ಆಸೆ–ಆಸಕ್ತಿ ತ್ಯಜಿಸಿದರೆ ನಾವು ಸಾಮ್ರಾಟರಾಗುತ್ತೇವೆ. 'ನಾನು' ಯಾರು ಎಂಬ ಪ್ರಶ್ನೆಗೆ ವಿಚಾರ, ವಿವೇಕಗಳಿಂದ ಜ್ಞಾನ ಲಭಿಸುತ್ತದೆ. ಇಂಥ ಜ್ಞಾನದಿಂದ ಪರಮಾತ್ಮ ಪರಮಾರ್ಥ ಸಾಧನೆಯಾಗದೇನು ?"

ಇದಕ್ಕೆ ಇನ್ನೆರಡು ಸಾಧನಗಳು ಆವಶ್ಯಕ. ಅವುಗಳೆಂದರೆ ನಮ್ರತೆ–ನಿರ್ದಂಭ. ಇವುಗಳಿಂದ ಮೂಲಭೂತ ಜ್ಞಾನ ಲಭಿಸುತ್ತದೆ. ಬಾಳು ಪಾವನವಾಗಿ ಹರಿಮಯವಾಗುತ್ತದೆ. "ಆತ್ಮ ಪ್ರಯತ್ನ ಪರಮೇಶ್ವರನ ಕೃಪೆ ಇವುಗಳಿಂದ ಮೇಲಕ್ಕೆ ಏರಬೇಕು. ಆತ್ಮವನ್ನು ದೇಹದಿಂದ ಬೇರ್ಪಡಿಸಲು ನಮಗೆ ತಿಳಿದಿದ್ದಲ್ಲಿ ಈ ಸಾಧನೆಗೆ ತುಂಬ ಸಹಾಯವಾದೀತು" ವಿನೋಬಾ ಏಸು ಕ್ರಿಸ್ತನ ಉದಾಹರಣೆ ನೀಡುತ್ತಾರೆ. ಅದು ಬಲಿದಾನದ ಉದಾಹರಣೆ. ಅವನಿಗೆ ಬಲವಾಗಿ ಮಳೆ ಜಡಿದಿದ್ದರು. ಆ ಸಮಯದಲ್ಲಿ ಕ್ರಿಸ್ತನ ಬಾಯಿಂದ 'ದೇವರೇ ಇವರು ಹೀಗೇಕೆ ಪೀಡಿಸುತ್ತಾರೆ ?' ಎಂಬ ಮಾತು ಹೊರಟಿತು. ಒಡನೆಯೇ ಆತ ಸವರಿಸಿಕೊಂಡು 'ದೇವರೇ ನಿನ್ನ ಇಷ್ಟದಂತೆ ಆಗಲಿ, ಅವರನ್ನು ಕ್ಷಮಿಸು. ಅವರಿಗೆ ತಾವು ಏನು ಮಾಡುತ್ತೇವೆಂಬುದೇ ಗೊತ್ತಿಲ್ಲ' ಎಂದ.

ದೇಹ–ಆತ್ಮಗಳನ್ನು ಬೇರ್ಪಡಿಸುವ ಧೈರ್ಯ, ಸ್ಥೈರ್ಯ ಯಾವುದು ? ಸತ್ಯ ಯಾವುದು, ಅಸತ್ಯ ಯಾವುದು ಎಂಬ ವಿವೇಕವಿಲ್ಲದೆ ಸಾಧ್ಯವಿಲ್ಲ. ಇವು ನಮ್ರತೆ, ನಿರ್ದಂಭಗಳಿಂದ ಬಂದಾವು. "ಜ್ಞಾನೇಂದ್ರಿಯಗಳೂ, ಕರ್ಮೇಂದ್ರಿಯಗಳೂ, ವಿಚಾರಪೂರ್ವಕವಾಗಿಯೇ ಕರ್ಮ ಮಾಡುತ್ತಿರುವಂತೆ ಆಗಬೇಕು. ಸದ್ಗುಣವೇ ಜ್ಞಾನವಾಗಿ ಪರಿಣಮಿಸೀತು. ಸಾಧನೆ, ಸಾಧ್ಯ ಎರಡೂ ಒಂದೇ.

ತ್ರಿಗುಣ

14 ನೆಯ ಅಧ್ಯಾಯ ಪ್ರಕೃತಿಯಲ್ಲಿ; ನಮ್ಮಲ್ಲಿ ಕಂಡು ಬರುವ ತ್ರಿಗುಣಗಳ ವಿಷಯ ಬರುತ್ತದೆ. ಅವು ತಮೋಗುಣ, ರಾಜಸಗುಣ, ಸತ್ವಗುಣ, ಈ

ಗುಣಗಳಿಗೆ ತಕ್ಕಂತೆ ನಮ್ಮ ಆತ್ಮವನ್ನು ಶರೀರದಿಂದ ಬೇರ್ಪಡಿಸುವ ಕಾರ್ಯ ನಡೆಯುತ್ತದೆ. ತಮೋಗುಣ ಪ್ರಧಾನನಾದವನು ಸೋಮಾರಿ, ರಜೋಗುಣ ಪ್ರಧಾನನಾದವನು ಚುರುಕು, ಕ್ರಿಯಾಶಾಲಿ. ಸತ್ವಗುಣ ಪ್ರಧಾನನಾದವನು ಸಮತೂಕದ ನಡೆಯುಳ್ಳವನು. ಆದಕ್ಕೆ ಪ್ರಾಧಾನ್ಯ ಸಿಕ್ಕಿದಂತೆ ಮನುಷ್ಯನ ವರ್ತನೆ.

ತಮೋಗುಣದಿಂದ ವ್ಯಕ್ತಿಯಲ್ಲಾಗಲೀ, ಸಮಾಜದಲ್ಲಾಗಲೀ ಸೋಮಾರಿತನದ ಪರಿಣಾಮವಾಗಿ ನಿದ್ದೆ, ಪ್ರಮಾದ. ಸೋಮಾರಿತನಕ್ಕೆ ಸಂದು ಕೊಡದಂತೆ ನಾವು ಎಚ್ಚರಿರಬೇಕು. ವಿನೋಬಾ ಹೇಳುತ್ತಾರೆ. "ಮೈ ಸೋಮಾರಿಯಾಯಿತೆಂದರೆ ಮನೋಬುದ್ಧಿಗಳೂ ಸೋಮಾರಿಗಳಾಗುತ್ತವೆ. ಇಂದು ಸಮಾಜದ ಕಟ್ಟಡ ಸೋಮಾರಿತನದ ತಳಹದಿಯ ಮೇಲೆ ನಿಂತಿದೆ. ಆದರಿಂದ ಅನಂತ ದುಃಖ ಪ್ರಾಪ್ತವಾಗಿದೆ. ಈ ಸೋಮಾರಿತನವನ್ನು ನಾವು ಗೆಲ್ಲಬಲ್ಲವರಾದರೆ ಸಮಸ್ತವಲ್ಲದಿದ್ದರೂ ಬಹುಭಾಗ ದುಃಖದಿಂದ ದೂರ ವಾದೀತು." ಈ ನಿದ್ದೆ, ಪ್ರಮಾದಗಳನ್ನು ಗೆಲ್ಲಲು ಉಪಾಯ, ಕೆಲಸಕ್ಕೆ ಮೊದಲಲ್ಲೂ ವಿಚಾರ, ಕಡೆಯಲ್ಲೂ ವಿಚಾರ. ಅಂತೂ ವಿಚಾರರೂಪಿ ಪರಮೇಶ್ವರ ನಿಂತಿರಲಿ.

"ರಜೋಗುಣ ಭಯಾನಕ ಶತ್ರು". ರಜೋಗುಣದಿಂದ ತಮೋಗುಣಕ್ಕೆ ತಮೋಗುಣದಿಂದ ರಜೋಗುಣಕ್ಕೂ ಬರುತ್ತೇವೆ. ಇದರ ಲಕ್ಷಣ ನಾನಾ ಕಾರ್ಯ ಮಾಡುವುದು. ಇದರಿಂದ ಕರ್ಮಸಂಗ ಹುಟ್ಟುತ್ತದೆ. ಲೋಭಾತ್ಮಕ ಕರ್ಮಾಸಕ್ತಿ. ಇದನ್ನು ಕುರಿತು ವಿನೋಬಾ ಹೀಗೆ ಹೇಳುತ್ತಾರೆ. "ಹಕ್ಕಿ ಮುಗಿಲಲ್ಲಿ ಹಾರುತ್ತದೆ. ನಾವೂ ಹಾರಬೇಕು. ಮೀನು ನೀರಿನೊಳಗೆ ಇರುತ್ತದೆ, ನಾವೂ ನೀರಿನಲ್ಲಿ ಮುಳುಗಿ ಅದರಂತೆ ಇರಬೇಕು..... ಚಿತ್ತವು ಸದಾ ಪರಿಭ್ರಮಿಸುತ್ತಿರುತ್ತದೆ. ನಾನಾ ವಾಸನಾಭೂತಗಳು ಮೈಯೊಳಗೆ ಹೋಗುತ್ತವೆ." ಇದರ ಇನ್ನೊಂದು ಲಕ್ಷಣ ಅಸ್ಥಿರತೆ, ಚಂಚಲತೆ ರಜೋಗುಣಕ್ಕೆ ಆಗಿಂದಾಗಲೇ ಫಲ ಬೇಕು. ಅಡ್ಡಿ ಬಂತೋ ಬೇರೆ ದಾರಿ ಹಿಡಿಯುತ್ತಾನೆ—ಕಟ್ಟ ಕಡೆಯಲ್ಲಿ ಏನೂ ಉಳಿಯದು".

ಇದನ್ನು ಗೆಲ್ಲಲು ಏನು ಉಪಾಯ ? ಸಂತತವಾಗಿ ಸ್ವಧರ್ಮ ಚಿಂತನೆ

ಮಾಡುತ್ತಾ ಅದಕ್ಕಾಗಿಯೇ ಸರ್ವಶಕ್ತಿಯನ್ನೂ ಉಪಯೋಗಿಸಬೇಕು. ಸ್ವಧರ್ಮ ರೂಪದ ಕರ್ಮದಲ್ಲಿ ಬಹಳ ಶಕ್ತಿಯಿದೆ.

ಇನ್ನುಳಿದುದು ಸತ್ವಗುಣ. ಇದರಿಂದಲೂ ಅಪಾಯವಿದೆ. ಇದು ಅಭಿಮಾನ, ಅಹಂಕಾರಗಳಿಗೆ ಆತ್ಮವನ್ನು ತಳ್ಳುತ್ತದೆ. "ಯಾವಾಗಲಾದರೂ ಒಮ್ಮೆ ನಮ್ಮ ಕೃತಿಯಿಂದ ನನಗೆ ಅಭಿಮಾನ ಹುಟ್ಟುತ್ತದೆ. ಅಭಿಮಾನ ಅಹಂಕಾರಕ್ಕೆ ಕಾರಣ."

ಈ ಅಹಂಭಾವ ಅಹಂಕಾರಗಳನ್ನು ಗೆದ್ದ ಸಾಧುಗಳು ಲೋಕಕ್ಕೆ ಪಾವನರೆನಿಸಿದ್ದಾರೆ. "ಎಂದೂ ನಾನು ಹೆಚ್ಚು ವಿಶೇಷವೆನಿಸಲಾಗದು" ಇದೇ ಸತ್ವವನ್ನೂ ಮೀರಿ ಹೋಗುವ ಉಪಾಯ.

ಸತ್ವಗುಣ ಇನ್ನೊಂದು ಆಸಕ್ತಿಗೆ ಬೀಳಬಹುದು. ಅದು ಸಿದ್ಧಿ, ಕೀರ್ತಿ. ಇದಕ್ಕೇನು ಉಪಾಯ : "ಉಪಭೋಗಕ್ಕಿಂತ ತ್ಯಾಗ ಸವಿ. ಇಡೀ ಜೀವನದಲ್ಲಿ ದೊರಕಿಸಿಕೊಂಡ ಮಹಾಫಲವನ್ನು ಸ್ವರ್ಗ ಸುಖವನ್ನು ಕಡೆಯಲ್ಲಿ ಧರ್ಮರಾಯ ಬಿಟ್ಟ. ಜೀವನದ ಸರ್ವ ತ್ಯಾಗಗಳ ಮೇಲೆ ಕಲಶವೇರಿಸಿದ."

ಈ ಮೂರು ಗುಣಗಳು ಒಮ್ಮೊಮ್ಮೆ ಸೋತಂತೆ ಕಾಣುತ್ತವೆ. ಆಗ ಅವು ನಮ್ಮನ್ನು, ನಮಗೆ ಅರಿವೇ ಇಲ್ಲದಂತೆ ಆಹುತಿ ತೆಗೆದುಕೊಳ್ಳುತ್ತವೆ. ಇದಕ್ಕೆ ಪರಮ ಮದ್ದನ್ನು ಭಗವಂತ ಹೇಳುತ್ತಾನೆ. "ಅತ್ಯಂತ ಏಕಾಗ್ರ ಚಿತ್ತದಿಂದ ನಿಷ್ಕಾಮ ಕರ್ಮದಿಂದ ನನ್ನನ್ನು ಭಜಿಸು, ನನ್ನ ಸೇವೆ ಮಾಡು, ಇದು ಕರಗತವಾಯಿತೋ ಇನ್ನೇನು ಉಳಿದಿದೆ ?"

ಕರ್ಮವೆಂದರೂ ಭಕ್ತಿಯೇ ಭಕ್ತಿಯೆಂದರೂ ಜ್ಞಾನವೇ, ಜ್ಞಾನವೆಂದರೂ ಭಕ್ತಿಯೇ. ಇವು ಕರ್ಮದಲ್ಲಿ ಪರಿಣತವಾಗಬೇಕು. ಇದನ್ನು ಭಗವಂತ ಗುಣಗಳ ಉತ್ಕರ್ಷದಲ್ಲಿ ತೋರಿಸಿದ್ದಾನೆ. ಅಪಕರ್ಷದಲ್ಲಲ್ಲ.

ಸದ್ಗುಣ—ದುರ್ಗುಣ ದಂಡುಗಳು

ಈ ರೀತಿ ಮನುಷ್ಯನ ಪ್ರಯತ್ನ ಸಾಗಿದಾಗ ಕಾಲ್ತೊಡಕುಗಳು ಉಂಟು. ಅವು ಅವನ ಅಂತಃಕರಣದಲ್ಲೇ ಇವೆ. -ಸದ್ಗುಣ-ದುರ್ಗುಣಗಳ ದಂಡು "ಒತ್ತಟ್ಟು ಸದ್ಗುಣಗಳ ದಂಡು. ಇನ್ನೊತ್ತಟ್ಟು ದುರ್ಗುಣಗಳ ದಂಡು. ಇದೇ ಕುರುಕ್ಷೇತ್ರ ಒಳಗೂ-ಹೊರಗೂ ಇದೆ. ನಿಜ ಹೇಳಬೇಕೆಂದರೆ ಈ

ಯುದ್ಧ ಅಂತರಂಗದಲ್ಲಿಯೇ ಇದೆ. ಇದನ್ನು 17 ನೆಯ ಅಧ್ಯಾಯದಲ್ಲಿ ಕಾಣಬಹುದು.

ಸದ್ಗುಣಗಳ ದಂಡಿಗೆ 'ಅಭಯ' ಮುಖಂಡನಾದರೆ, ದುರ್ಗುಣಗಳ ದಂಡಿಗೆ ಮೂವರು ನಾಯಕರು 'ಸತ್ತೆ ಸಂಸ್ಕೃತಿ, ಸಂಪತ್ತು', ಇದಕ್ಕೆ ಕಾಮ ಕ್ರೋಧ, ಲೋಭ ಇವುಗಳಿಂದ ಮುಕ್ತಿಗೆ ಸಂಯಮವೊಂದೇ ಮಾರ್ಗ. ವಿನೋಬಾ ಹೇಳುತ್ತಾರೆ. "ಮನುಷ್ಯನ ಮನಸ್ಸಿನಲ್ಲಿ, ಅವನ ಮನಸ್ಸಿನ ಪ್ರತಿಬಿಂಬವಾದ ಸಮಾಜದಲ್ಲಿ ಎರಡು ವ್ಯಕ್ತಿಗಳ, ಎರಡು ಸಂಸ್ಕೃತಿಗಳ, ಎರಡು ಸಂಪತ್ತಿಗಳ ಜಗಳ ನಡೆದಿದೆ. ಅದರಲ್ಲಿ ದೈವೀ ಸಂಪತ್ತು ವಿಕಾಸಗೊಳ್ಳಬೇಕು"

ಶುಭ ವೃತ್ತಿ

"ನಮ್ಮ ಮನಸ್ಸು ಪ್ರಸನ್ನವೂ, ವಿಮುಕ್ತವೂ ಆಗಿರಬೇಕಾದರೆ ನಮ್ಮ ನಡತೆಗೆ ಕಟ್ಟು ನಿಯಮ ಇರಬೇಕು. ನಮ್ಮ ನಿತ್ಯಕಾರ್ಯ ಕ್ರಮ ಯಾವುದಾದರೊಂದು ನಿರ್ದಿಷ್ಟ ರೀತಿಯಲ್ಲಿ ಸಾಗಬೇಕು.

ಕರ್ಮಯೋಗವನ್ನು ಭಗವಂತ ಮೊದಲು ಹೇಳಿದುದು ಸೂರ್ಯನಿಗೆ. ಸೂರ್ಯ ಮನುವಿಗೆ ಹೇಳಿದ. ಎಂದರೆ ವಿಚಾರ ಪರಮಾನವನಿಗೆ. 'ಸೂರ್ಯ ಸ್ವತಂತ್ರ, ಮುಕ್ತ ಅವನು ನಿಯಮಿತ." ಅವನು ನಿತ್ಯ ತಪಸಿ. ಲೋಕಕ್ಕೆ ಶಾಖವನ್ನೂ, ಬೆಳಕನ್ನೂ ಕೊಡುವುದಿಲ್ಲವೇ ? ಹಾಗೆಯೇ ನಾವು ನಿಯಮಿತ ರೀತಿಯಲ್ಲಿ ನಿತ್ಯವೂ ಕರ್ಮ ಮಾಡಬೇಕು. ಹಾಗಾಗದಿದ್ದರೆ ನಮಗೂ ಸುಖವಿಲ್ಲ. ಜಗತ್ತಿಗೂ ಸುಖವಿಲ್ಲ, ಹರ್ಷವಿಲ್ಲ, 17 ನೆಯ ಅಧ್ಯಾಯ ಇದನ್ನು ತಿಳಿಸುತ್ತದೆ. ವಿನೋಬಾ ಹೇಳುತ್ತಾರೆ. "ಈ ಸಮಾಜ, ಸೃಷ್ಟಿ, ಶರೀರ–ಮೂರೂ ಸಂಸ್ಥೆಗಳ ಕೆಲಸ ಉತ್ಕೃಷ್ಟವಾಗಿ ಸಾಗುವಂತೆ ನಡೆಯುವುದೇ ನಮ್ಮ ಕರ್ತವ್ಯ. ಈ ಮೂರು ಮಾತ್ರ ನಾವು ಕಟ್ಟಿದುದಲ್ಲ. ಸ್ವಭಾವತಃ ನಮಗೆ ದೊರೆತವು. ಇವು ಕೃತ್ರಿಮ ಸಂಸ್ಥೆಗಳಲ್ಲ. ಯಜ್ಞ, ದಾನ, ತಪಗಳೆಂಬ ಸಾಧನಗಳಿಂದ ಈ ಸಂಸ್ಥೆಗಳ ನಷ್ಟವನ್ನು ತುಂಬಿಕೊಡುವುದೇ ನಮಗೆ ಸ್ವಭಾವ ಪ್ರಾಪ್ತ ಧರ್ಮ. ಹೀಗೆ ನಮ್ಮ ಕೃತಿ ಶುಭ ಕೃತಿಯಾಗಬೇಕು. ಸಹಜ ಕೃತಿಯಾಗಬೇಕು.

ನಮ್ಮ ಸಾಧನೆ ಸಾತ್ವಿಕವಾಗಬೇಕು. ಇದು ಚಿತ್ತಶುದ್ಧಿಗೆ ಕಾರಣವಾಗಿರ

ಬೇಕು. ಆಗ ಮಾತ್ರ ಅದನ್ನು ಪರಮಾತ್ಮನಿಗೆ ಅರ್ಪಿಸಬಹುದು. ಎಂದರೆ ಮನಸ್ಸು-ಮಂತ್ರ-ಮನಸ್ಸಿನಲ್ಲಿ ಶುಭವೃತ್ತಿ ಆಗಿರಬೇಕು. "ಕ್ರಿಯೆ ಸಾತ್ವಿಕವೂ ಸುಂದರವೂ ಆಗುತ್ತದೆ. ಅದು ಭಗವಂತನ ಆರಾಧನೆಯಾದೀತು."

ಇಂಥ ಸೇವೆ ನಮ್ಮಿಂದ ಆಗಬೇಕಾದರೆ ನಾವು ದಿನ ನಿತ್ಯ ಸೇವಿಸುವ ಆಹಾರ ಸಾತ್ವಿಕ ಆಗಿರಬೇಕು, "ಎಂಥ ಅನ್ನವೊ ಅಂಥ ಮನಸು. ಆಹಾರ ಪರಿಮಿತಿಯಾಗಿರಬೇಕು. ಶುದ್ಧವಾಗಿರಬೇಕು. ಆಹಾರ ಯಾವುದು ಎಂಬುದಕ್ಕಿಂತ ಎಷ್ಟು ಎಂಬುದು ಹೆಚ್ಚು ಮಹತ್ವದ್ದು. ಆಹಾರದ ವಿವರ ಮುಖ್ಯವೆಂದಲ್ಲ. ಯುಕ್ತ ಪ್ರಮಾಣದಲ್ಲಿ ತೆಗೆದುಕೊಳ್ಳುತ್ತೇವೆಯೋ ಇಲ್ಲವೋ ಎಂಬುದು ಹೆಚ್ಚು ಮಹತ್ವವಾದುದು."

ನಾವು ತೆಗೆದುಕೊಂಡ ಆಹಾರ ಈ ರೀತಿ ಇದ್ದರೆ ಸೇವಾ ಜೀವನಕ್ಕೆ ತೊಡಕಾಗುವುದಿಲ್ಲ. ನಮ್ಮ ಶರೀರ ಸೇವೆಗೆ ಸಮರ್ಥವಾಗುತ್ತದೆ.

ತ್ಯಾಗ

ಇನ್ನು ಕಡೆಯ ಅಧ್ಯಾಯದ ವಿಷಯ. ಇದು ಗೀತೆಯ ಪರಿಸಮಾಪ್ತಿ ಅಧ್ಯಾಯ. ಇದಕ್ಕೆ ವಿನೋಬಾ "ತ್ಯಾಗ " ಎಂಬ ಶೀರ್ಷಿಕೆ ಕೊಟ್ಟಿದ್ದಾರೆ. ತ್ಯಾಗ ಎಂದರೇನು ? ಬಿಡುವುದು. ಯಾವುದನ್ನು ಬಿಡುವುದು ? "ಕರ್ಮಫಲ ತ್ಯಾಗ. ಕರ್ಮವನ್ನು ಸತತ ಮಾಡಬೇಕು, ಫಲವನ್ನು ಬಿಡಬೇಕು. ಈ ಸಂದೇಶ ಎಲ್ಲೆಲ್ಲೂ ಇದೆ, ಗೀತೆಯಲ್ಲಿ"

" ಫಲತ್ಯಾಗ ಪೂರ್ವಕ ಕರ್ಮವೆಂದರೆ ಕೇವಲ ಕೃತ್ರಿಮ, ತಾಂತ್ರಿಕ. ಯಾಂತ್ರಿಕ ಕ್ರಿಯೆಯಲ್ಲ. ಈ ಒರೆಗಲ್ಲಿನಿಂದಲೇ ಯಾವುದನ್ನು ಮಾಡಬೇಕು, ಯಾವುದನ್ನು ಬಿಡಬೇಕು, ಎಂಬುದು ತಾನಾಗಿಯೇ ನಿರ್ಧಾರವಾಗುತ್ತದೆ..... ಹಿಂಸಾತ್ಮಕ ಕರ್ಮ, ಅಸತ್ಯಮಯ ಕರ್ಮ ಚೋರ ಕರ್ಮ, ಇವನ್ನು ಫಲ ತ್ಯಾಗದ ಮೂಲಕ ಮಾಡಲು ಬರುವಂತಿಲ್ಲ ಫಲತ್ಯಾಗದ ಒರೆಗಲ್ಲಿಗೆ ತಿಕ್ಕಿದೊಡನೆಯೇ ಈ ಕರ್ಮಗಳು ಉದುರಿಬೀಳುತ್ತವೆ. ರವಿಯ ಪ್ರಭೆ ಮೂಡಿದರೆ ಎಲ್ಲವೂ ಬೆಳಕಾಗುತ್ತದೆ. ಆದರೆ ಕತ್ತಲು ಬೆಳಕಾಗಿ ಕಂಡೀತೆ ? ಅದು ಮಾಯವಾಗುತ್ತದೆ......ಮಾಡಬೇಕಾದ ಕರ್ಮವನ್ನು ಫಲತ್ಯಾಗ ಪೂರ್ವಕ

ಮಾಡಬೇಕು. ರಾಜಸ, ತಾಮಸ ಕರ್ಮ, ಕಾಮ್ಯ,-ನಿಷಿದ್ಧ ಕರ್ಮಗಳು ಫಲ ತ್ಯಾಗದ ಕತ್ತರಿ ಹಿಡಿದರೆ ತಾವೇ ಕತ್ತರಿಸಿಬೀಳುತ್ತವೆ."

ಈ ಬೋಧೆಯನ್ನೆಲ್ಲ ಕೇಳಿ, ಸವಿದು, ಅರ್ಜುನನ ಮೋಹ ನಷ್ಟ ವಾಯಿತು. ಅವನು ಕ್ರಿಯಾಮಗ್ನನಾಗುತ್ತಾನೆ. ಅವನೇ ಹೇಳುತ್ತಾನೆ. 'ನನ್ನ ಮೋಹ ನಷ್ಟವಾಯಿತು, ಅವನ ಇಚ್ಛೆಯನ್ನುವುದೇ ಇಲ್ಲ. ಎಲ್ಲ ಭಗವಂತನ ಇಚ್ಛೆ.'

ಹೀಗೆಯೇ, ನಾವು ಭಗವಂತನ ಇಚ್ಛೆಯ ಸಾಧನವಾಗಬೇಕು. ಆಗ ನಮ್ಮ ಭಾವಾವಸ್ಥೆ ಕ್ರಿಯಾವಸ್ಥೆ ಜ್ಞಾನಾವಸ್ಥೆ, ಎಲ್ಲವೂ "ಅತ್ಯಂತ ನಿರ್ಮಲ ಆದರ್ಶಕ್ರಿಯೆ ಆಗಿ, ಮೂರು ಲೋಕದ ಪಾಪ ಪುಣ್ಯವೂ 'ಅವನದೇ' ಆದೀತು ನಾವು ಮೃತ ದೇಹವಲ್ಲ, ನಾವು ಶವವಲ್ಲ ; "ಶಿವ" ಆದೇವು.

೩. ಗೀತಾಪ್ರವಚನ-ಸರ್ವೋದಯ

ಕ್ರಾಂತಿ ಪಥಕ್ಕೆ ಮಾರುಹೋಗಿ ಶಾಂತಿಯನ್ನು ಅರಸುತ್ತಾ ವಿನೋಬಾ ಮನೆ ಬಿಟ್ಟು ಕಾಶಿಗೆ ನಡೆದರು. ಅಲ್ಲಿ ಶಾಸ್ತ್ರಾಧ್ಯಯನವಾದರೂ ಶಾಂತಿ ದೊರೆಯಲಿಲ್ಲ. ಕ್ರಾಂತಿಯ ನಿಜ ಅರ್ಥ ತಿಳಿಯಲಿಲ್ಲ.

ಗಾಂಧೀಜಿ ಆಗತಾನೇ ದಕ್ಷಿಣ ಆಫ್ರಿಕಾದಿಂದ ಬಂದು ಅಹಮದಾ ಬಾದಿನ ಬಳಿಯ ಕೊಚರಾಬ್ ಆಶ್ರಮದಲ್ಲಿ ನೆಲೆಸಿದ್ದರು. ಅವರು ಕಾಶೀ ವಿಶ್ವವಿದ್ಯಾನಿಲಯದ ಆರಂಭೋತ್ಸವ ಸಮಯದಲ್ಲಿ ಮಾಡಿದ ಭಾಷಣ ಓದಿ ಕೆಲವು ಸಂದೇಹಗಳನ್ನು ಪರಿಹರಿಸಿಕೊಳ್ಳಲು, ವಿನೋಬಾ, ಕೊಚರಾಬ್ ಆಶ್ರಮಕ್ಕೆ ಹೋದರು. ಅಲ್ಲಿಗೆ ಹೋದುದೇ, ಅವರು ತಮ್ಮ ನೆಚ್ಚಿನ ನಾಯ ಕನನ್ನು, ಗುರುವನ್ನು ಕಂಡುಕೊಂಡರು. ಅಂತರಂಗದಲ್ಲಿ ಶಾಂತಿಯನ್ನು ಕಂಡುಕೊಂಡರು. ಕ್ರಾಂತಿಯ ನಿಜ ಅರ್ಥ ಮೂಲಭೂತವಾಗಿ ಮೌಲ್ಯ ಪರಿ ವರ್ತನೆ, ಪರಿಸರ ಪರಿವರ್ತನೆ, ಜೀವನ ಪರಿವರ್ತನೆಗಳಲ್ಲಿ ಅಡಗಿದೆ ಎಂದು

ತಿಳಿದುಕೊಂಡರು. ರಾಮಕೃಷ್ಣ ಪರಮಹಂಸರಿಗೆ ವಿವೇಕಾನಂದ ಸಿಕ್ಕಂತೆ, ಬುದ್ಧದೇವನಿಗೆ ಆನಂದ ದೊರೆತಂತೆ, ಏಸುಕ್ರಿಸ್ತನಿಗೆ ಪಾಲ್ ದೊರೆತಂತೆ ಆಯಿತು. ಗಾಂಧೀಜಿಯ ನಿರ್ಯಾಣದ ತರುವಾಯ ಅಹಿಂಸಾತ್ಮಕ ಸಮಾಜ ಪರಿವರ್ತನೆಗೂ, ಆರ್ಥಿಕಕ್ರಾಂತಿಗಾಗಿಯೂ ಕಾಲುಶತಮಾನಕಾಲ ಭೂದಾನ-ಗ್ರಾಮದಾನ ಆಂದೋಲನ ನಡೆಸಿದರು. ಸ್ವತಂತ್ರ ಭಾರತದ ಇತಿಹಾಸದಲ್ಲಿ ಇದೊಂದು ಉಜ್ವಲ ಅಧ್ಯಾಯ.

ಒಮ್ಮೆ ಯಾರೋ ಒಬ್ಬರು, "ಗಾಂಧೀಜೀ ನಿಮ್ಮ ಮೇಲೆ ಎಷ್ಟು ಪ್ರಭಾವ ಬೀರಿದ್ದಾರೆ ?" ಎಂದು ವಿನೋಬಾ ಅವರನ್ನು ಪ್ರಶ್ನಿಸಿದರಂತೆ. ಅದಕ್ಕೆ ವಿನೋಬಾ ಉತ್ತರ ಹೀಗಿತು: "ಇವೊತ್ತು ನಾನೊಂದು ಬಾಳೆಹಣ್ಣು ತಿಂದೆ. ಅದು ಜೀರ್ಣವಾಗಿ ನನ್ನ ಅಂಗಾಂಗಗಳಲ್ಲಿ ಆವರಿಸಿದೆ. ಎಲ್ಲಿದೆಯೆಂದು ಹೇಗೆ ಹೇಳಲಿ." ವಿನೋಬಾ, ಗಾಂಧೀ ವಿಚಾರ ಸರ್ವಸ್ವದ ಪ್ರತಿರೂಪು.

ಒಂದೇ ಒಂದು ಪದ ಗಾಂಧೀವಿಚಾರ ಸರ್ವಸ್ವವನ್ನು ಸೂಚಿಸುತ್ತದೆ. ಅದು "ಸರ್ವೋದಯ". ವಿನೋಬಾ ಸರ್ವೋದಯಕ್ಕೆ ಸದಾ ಶ್ರಮಿಸುತ್ತಿದ್ದಾರೆ. ಅವರನ್ನು 'ಸರ್ವೋದಯಾಚಾರ್ಯರು' ಎಂದು ಕರೆಯಲು ಅಡ್ಡಿಯಿಲ್ಲ. ಅವರನ್ನು ಒಬ್ಬರು 'ಅಣುಯುಗದ ಕೊನೆಯ ಸಂತ' ಎಂದು ಕರೆದರೆ, ಇನ್ನೊಬ್ಬರು 'ಅಣುಯುಗದ ಪ್ರಥಮ ಸಂತ' ಎಂದಿದ್ದಾರೆ.

ಸರ್ವೋದಯ ಎಂದರೇನು ? ಸರ್ವರ ಉದಯ, ಉತ್ಕರ್ಷ. ಮಾನವ ಜಗತ್ತಿನ ಉದಯವಷ್ಟೇ ಅಲ್ಲ; ಸಮಸ್ತ ಪ್ರಾಣಿ ಜಗತ್ತು ಮತ್ತು ಸಸ್ಯ ಜಗತ್ತುಗಳ ಉದಯ. ಪ್ರಾಚೀನ ಋಷಿಮುನಿಗಳು, ಸಂತರು, ಆಧುನಿಕ ವಿಚಾರವಂತರು ಎಲ್ಲ ಸರ್ವೋದಯದ ಕನಸನ್ನು ಕಂಡಿದ್ದಾರೆ. ನಮ್ಮ ಕಾಲದಲ್ಲಿ ಗಾಂಧೀಜಿಯೇ ಇದರ ಆದ್ಯಪ್ರವರ್ತಕರು ; ಆಧ್ಯಾತ್ಮಿಕ ಅರ್ಥದಲ್ಲಿಯೂ, ಲೌಕಿಕ ಅರ್ಥದಲ್ಲಿಯೂ, ಕೇವಲ ಲೌಕಿಕ ಅರ್ಥದಲ್ಲಿ, ಜೀವನದ ಆಂಶಿಕ ಅರ್ಥದಲ್ಲಿ, ಕಾರ್ಲ್‌ಮಾರ್ಕ್ಸ್ ಅದರ ಪ್ರವರ್ತಕ. ಅವನ ಅರ್ಥ, ಮಾನವ ಕೇವಲ "ಭೌತವಸ್ತು"ವಲ್ಲದೆ ಬೇರೆ ಅಲ್ಲ. ಗಾಂಧೀಜಿ ಜಗತ್ತಿಗೆ ನೀಡಿದ ಅಮೂಲ್ಯ ಸಂದೇಶ ಸರ್ವೋದಯ. ಗಾಂಧೀ–ವಿಚಾರ 'ಸಾಮ್ಯಯೋಗ'ವಾದರೆ ಮಾರ್ಕ್ಸ್‌ನದು "ಸಾಮ್ಯವಾದ".

ಗಾಂಧೀಜಿ ಕಂಡ ಸರ್ವೋದಯ ಕನಸು ಮುಪ್ಪುರಿಗೊಂಡ ಬಾಳಿನ

ತತ್ತ್ವ, ಸಿದ್ಧಾಂತ. ಅದು ಈ ರೀತಿ ಇದೆ (1) ಸಮಷ್ಟಿಯ ಒಳಿತು (2) ಆರ್ಥಿಕ ಸಮಾನತೆ (3) ಶ್ರಮನಿಷ್ಠೆ. ಒಂದನೆಯದು ಆಧ್ಯಾತ್ಮಿಕ. ಎರಡನೆಯದು ಮತ್ತು ಮೂರನೆಯದು ಉಪಮೇಯಗಳು.

ಸರ್ವೋದಯ ಒಂದು ಆದರ್ಶಸಮಾಜ ಕಲ್ಪನೆ. ಅದು ಸತ್ಯ-ಅಹಿಂಸಾ ಮಾರ್ಗದಲ್ಲಿ ಶೋಷಣೆ—ಹೀನ, ವರ್ಗರಹಿತ ಸಮಾಜವನ್ನು ರಚಿಸುವುದು; ಅದು ಜಾತಿಭಾವನೆ ರಹಿತ.

ಶ್ರಮನಿಷ್ಠೆ

ಇಂದು ಜಗತ್ತಿನಲ್ಲಿ ಶೋಷಣೆ ಬಹುಪ್ರಕಾರವಾಗಿ ನಡೆದಿದೆ. ಮಾನವನೇ ಮಾನವನನ್ನು ಶೋಷಣೆ ಮಾಡುತ್ತಾನೆ. ಬಲಿಷ್ಠರು ಬಲಹೀನರನ್ನು ಶೋಷಿಸುತ್ತಾರೆ. ಐಶ್ವರ್ಯವಂತರು ಬಡವರನ್ನು ಶೋಷಿಸುತ್ತಾರೆ. ಅವಿದ್ಯಾವಂತರನ್ನು ವಿದ್ಯಾವಂತರು ಶೋಷಿಸುತ್ತಾರೆ. ವ್ಯಕ್ತಿಗೆ ಸಮಾಜದ ಒಳಿತು ಎಂಬ ಭಾವನೆ ಶೂನ್ಯವಾಗಿದೆ. ಹಾಗೆಯೇ ವರ್ಗಗಳಿಗೂ, ಜಾತಿಗಳಿಗೂ. ಇದರಿಂದ ಇಡಿಯ ಸಮಾಜದ ಭಾವನೆ ಲೋಪವಾಗಿದೆ. ತನ್ನ ಸುಖವೇ ಸುಖ ಎಂಬ ಸ್ವಾರ್ಥ ಮೇಲ್ಗೈ ಆಗಿದೆ. ಪರಾರ್ಥ ಎಂಬ ಭಾವನೆ ಅಪರೂಪ. ಪರರ ದುಃಖದ ಬಗೆಗೆ ಸ್ಪಂದಿಸುವ ಅಂಶ ಕಮ್ಮಿಯಾಗಿದೆ.

ಗೀತಾ ಪ್ರವಚನದ ಹದಿನಾಲ್ಕನೆಯ ಅಧ್ಯಾಯ ಓದುಗರ ಗಮನವನ್ನು ಸಮಾಜದ ಕಡೆಗೆ ಸೆಳೆಯುತ್ತದೆ. ನಮ್ಮಲ್ಲಿರುವ ತಮೋಗುಣ ಮತ್ತು ರಜೋಗುಣಗಳ ಪ್ರಭಾವವೇ ನಮ್ಮ ಪ್ರಜ್ಞಾರಹಿತ ಅನಾಸ್ತೆಗ ಕಾರಣ. ಸೋಮಾರಿತನ ಬಿಟ್ಟು ಕೆಲಸ ಮಾಡುವುದೇ ಅದಕ್ಕೆ ಮದ್ದು. ಎಂದರೆ ತಮೋಗುಣವನ್ನು ಗೆಲ್ಲಬೇಕು. ವಿನೋಬಾ ಹೇಳುತ್ತಾರೆ. "ಸಾಮಾನ್ಯ ಮನುಷ್ಯನಿಗೂ ಕೂಡ ಕನಿಷ್ಠ ಪಕ್ಷ ಇಂತಿಷ್ಟು ಸುಖ ಸಿಗಬೇಕು. ಹಾಗೆ ಸಮಾಜ ರಚನೆಯಾಗಬೇಕು ಎಂಬ ಚರ್ಚೆನಡೆದಿದೆ. ಒತ್ತಟ್ಟಿಗೆ ಅತಿಶಯ ಸುಖ, ಒತ್ತಟ್ಟಿಗೆ ಅತ್ಯಂತ ದುಃಖ ಇವೆ. ಒಂದು ಕಡೆ ಐಶ್ವರ್ಯದ ರಾಶಿ, ಇನ್ನೊಂದು ಕಡೆ ಬಡತನದ ಆಳವಾದ ಕಂದಕ. ಈ ಸಾಮಾಜಿಕ ವಿಷಮತೆಯನ್ನು ಹೇಗೆ ದೂರ ಮಾಡುವುದು ? ಅತ್ಯಾವಶ್ಯಕವಾದ ಸುಖ ಎಲ್ಲರಿಗೂ ದೊರಕಲೇ ಬೇಕು. ಎಲ್ಲರೂ ಸೋಮಾರಿತನ ಬಿಟ್ಟು ಕೆಲಸ ಮಾಡುವುದೇ

ಅದಕ್ಕೆ ಉಪಾಯ. ದುಃಖಕ್ಕೆ ಮೂಲಕಾರಣ ಸೋಮಾರಿತನ. ಎಲ್ಲರೂ ಶರೀರಶ್ರಮದ ನಿಷ್ಠೆ ಕೈಗೊಂಡರೆ, ಕೆಲಸ ಮಾಡುವ ಸಂಕಲ್ಪ ತೊಟ್ಟರೆ ಈ ದುಃಖ ದೂರವಾಗುತ್ತದೆ."

ಇದರ ಅರ್ಥವೇನು ? ಸರ್ವೋದಯದ ಮೂರು ಅಂಶಗಳೂ ಒಂದೇ ಏಟಿಗೆ ಲಭಿಸುತ್ತವೆ. ಸಮಾಜದಲ್ಲಿ ಶಾಂತಿ-ಸುಖ, ಸಂತೋಷ ಲಭಿಸುತ್ತವೆ. ಸಮಷ್ಟಿಯ ಒಳಿತು, ಆರ್ಥಿಕ ಸಮಾನತೆ-ಶ್ರಮನಿಷ್ಠೆ ಮೂರೂ ಮೂಡುತ್ತವೆ. ಸಮಷ್ಟಿಯ ಒಳಿತು ಎಂದರೆ ಒಟ್ಟಾರೆ ಸಮಾಜದ ಒಳಿತೇ; ಅದರಲ್ಲಿ ವ್ಯಕ್ತಿಯ ಒಳಿತೂ ಅಡಗಿರುತ್ತದೆ. ಆರ್ಥಿಕ ಸಮಾನತೆ ಎಂದರೆ ಬುದ್ಧಿಜೀವಿ, ಕಾರ್ಮಿಕ ಎಂಬ ವ್ಯತ್ಯಾಸ ಮಾಯವಾಗುತ್ತದೆ. ಎಲ್ಲರೂ ಉದರಂಭರಣಕ್ಕಾಗಿ ಕೆಲಸ ಮಾಡುವುದರಿಂದ ಸಮಾನ ಉಪಪತ್ತಿ ಪಡೆದು ಸಂಪತ್ತು ನ್ಯಾಯವಾಗಿ ಹಂಚಿದಂತಾಗುತ್ತದೆ. ಇವೆಲ್ಲ ಮೂರನೆಯ ಅಂಶವಾದ ಶ್ರಮನಿಷ್ಠೆಯ, ಶರೀರ ಪರಿಶ್ರಮದ ಫಲ. ವ್ಯಕ್ತಿ ಅಥವಾ ಸಮಾಜಗಳು ತಮ್ಮ ವಿಶೇಷಗುಣ ಗಳನ್ನು, ಕಲಿಕೆಯನ್ನು, ಸಮಷ್ಟಿಗೆ ಪುಕ್ಕಟೆ ಧಾರೆ ಎರೆದು ಶರೀರಶ್ರಮದಿಂದ ಜೀವನವನ್ನು ಸಾಗಿಸುತ್ತಾರೆ. ಸುಖಮಯ, ಸುಂದರ ಸಮಾಜ ತಾನಾಗಿಯೇ ಜನಿಸುತ್ತದೆ.

ವಿನೋಬಾ ಇಂದಿನ ಸಮಾಜ ಸ್ಥಿತಿಯನ್ನು ಹೀಗೆ ಚಿತ್ರಿಸುತ್ತಾರೆ. "ಆದರೆ ಸಮಾಜದಲ್ಲಿ ಏನು ಕಂಡು ಬರುತ್ತದೆ. ಒಂದು ಕಡೆ ತುಕ್ಕು ಹಿಡಿದು ಮೂಲೆಗೆ ಬಿದ್ದ ನಿರುಪಯೋಗಿಯಾದ ಜನ. ಶ್ರೀಮಂತರ ಮೈ ಉಪಯೋಗವೇ ಇಲ್ಲದೆ ತುಕ್ಕು ಹಿಡಿದಿದೆ. ಇನ್ನೊಂದು ಕಡೆ ಮೈ ಸವೆ ಸವೆದು ಜೀರ್ಣವಾಗಿ ಹೋಗುವಷ್ಟು ವಿಪರೀತ ದುಡಿತ. ಎಲ್ಲ ಸಮಾಜಗಳಲ್ಲೂ ಮೈ ದುಡಿತ ತಪ್ಪಿಸಿಕೊಳ್ಳುವ ಪ್ರಕೃತಿ ಇದೆ. ಸಾಯುವ ಗಳಿಗೆಯ ತನಕ ಯಾರು ದುಡಿಯಬೇಕಾಗಿದೆಯೋ ಅವರು ಅದನ್ನು ಸಂತೋಷದಿಂದ ಮಾಡುತ್ತಿಲ್ಲ. ಬಿಡದ ಕರ್ಮ ಎಂದು ಮಾಡುತ್ತಾರೆ. ಜಾಣರಾದವರು ಶರೀರಶ್ರಮ ತಪ್ಪಿಸಿ ಕೊಳ್ಳಲು ಸಾವಿರ ನೆಪ ಹೇಳುತ್ತಾರೆ. ವ್ಯರ್ಥವಾಗಿ ಶರೀರಶ್ರಮದಲ್ಲಿ ಕಾಲಹರಣ ಮಾಡಲೇಕೆ ?" ಎನ್ನುತ್ತಾರೆ.

ಇದರ ಪರಿಣಾಮ ಏನು ? "ಸಮಾಜ ಎರಡು ಭಾಗ ಆಗಿದೆ. ದುಡಿ ದುಡಿದು ಸತ್ತು ಸುಣ್ಣವಾಗುವ ಜನ; ಅತ್ತಣ ಕಡ್ಡಿ ಇತ್ತ ಹಾಕದೆ ಇಡದ ಜನ,

ನನ್ನ ಗೆಳೆಯನೊಬ್ಬ ಹೇಳುತ್ತಿದ್ದ. 'ಕೆಲವು ಬರೀ ಮೈ. ಕೆಲವು ಬರೀ ಬುರುಡೆ, ಒಂದು ಕಡೆ ಬರೀ ರುಂಡ, ಇನ್ನೊಂದು ಕಡೆ ಬರೀ ಮುಂಡ. ರುಂಡ ಬರೀ ಯೋಚನೆಯಾಗಬೇಕು. ಮುಂಡ ದುಡಿದುಡಿದು ಸವೆದು ಹೋಗಬೇಕು. ರಾಹುಕೇತುಗಳಂತೆ ಗುಂಪಾಗಿದೆ ಈ ಸಮಾಜ." ಇದು ನಮ್ಮಲ್ಲಿ ನೆಲೆಮಾಡಿ ಕೂತಿದೆ.

ಸಮಾಜದಲ್ಲಿರುವ ಈ ವಿಷಮಸ್ಥಿತಿಯನ್ನು ತಪ್ಪಿಸಲು, ಸಮಾನತೆಯ ಸಾಮ್ಯ ತರಲು ಮಾರ್ಕ್ಸ್ 'ಸಾಮ್ಯವಾದ' ಹೇಳುತ್ತಾನೆ. 'ಸಾಮ್ಯವಾದದ ಪ್ರಕಾರ ಪ್ರಥಮ ಹೆಜ್ಜೆಯಲ್ಲಿ ಪ್ರಭುತ್ವ ಅಥವಾ ಸರಕಾರಯಂತ್ರ ಸರ್ವ ವ್ಯಾಪಿಯಾಗಬೇಕು. ಹಾಗಾದರೆ ಎಂದೋ ಒಂದು ದಿನ ಸಾಮ್ಯ ಮೂಡೀತು! ಇದು ನಾಯಿ ಬಾಲಕ್ಕೆ ದಬ್ಬೆ ಕಟ್ಟಿದಂತೆ. ದಬ್ಬೆ ಸಡಿಲವಾಯಿತೋ ಯಥಾ ಪ್ರಕಾರ. ಮನುಷ್ಯ ಸ್ವಭಾವ ಕ್ರಾಂತಿಕಾರಕ ರೀತಿಯಲ್ಲಿ ಬದಲಾಗಬೇಕೇ ಹೊರತು, ಮೂಲಭೂತವಾಗಿ ಪರಿವರ್ತನೆ ಹೊಂದಬೇಕೇ ಹೊರತು ಹಿಂಸೆ ಯಿಂದಲ್ಲ; ಕಾನೂನಿನಿಂದಲೂ ಅಲ್ಲ. ಕಾನೂನಿನ ಹಿಂದೆ ಪ್ರೀತಿಯ, ಸ್ವಪ್ರೇರಣೆಯಿದ್ದ ಹೊರತೂ, ಅದರ ಹಿಂದೆ ಜನದ ನೈತಿಕ ಬಲ ಇದ್ದ ಹೊರತೂ ಅದು ಯಶಸ್ವಿಯಾಗಲಾರದು. ಇದು ವಿಚಾರಯೋಗ್ಯ. ಅಲ್ಲದೆ ಅಧಿಕಾರ ಅಥವಾ ಸತ್ತೆಯ, ಸಂಪತ್ತಿನ, ಸೈನ್ಯದ ಸರ್ವಾಧಿಕಾರವೇ ನಡೆದೀತು.

ಮತ್ತೆ ಸಮಾಜದಲ್ಲಿ ಸಾಮ್ಯತೆ ಹೇಗೆ ಮೂಡೀತು ? ಅದು 'ವಾದ' ದಿಂದಲ್ಲ. ಒಂದು ಬಗೆಯ ಯೋಗದಿಂದ; ಸಾಮ್ಯಯೋಗದಿಂದ. ಇದನ್ನು ವಿನೋಬಾ "ಸಾಮ್ಯಯೋಗ" ಎನ್ನುತ್ತಾರೆ. ಸಮತೆ ಯೋಗದ ಫಲ. ಸಮತೆ ಒಂದು ಕುಶಲತೆ, ಅದೇ ಯೋಗ. ಇದನ್ನು ವಿನೋಬಾ ಹದಿನೇಳನೆಯ ಅಧ್ಯಾಯದಲ್ಲಿ 'ಸುಬದ್ಧ ಕಾರ್ಯಕ್ರಮ' ಎನ್ನುತ್ತಾರೆ. ಪ್ರಾಚೀನ ಶಬ್ದಗಳಾದ ಯಜ್ಞ, ದಾನ, ತಪಗಳಿಗೆ ಹೊಸ ಅರ್ಥ ನೀಡಿದಾರೆ. ಇದು ದಿನದ ಕಾರ್ಯ ಕ್ರಮವಾಗಬೇಕು. ವಿನೋಬಾ ಹೇಳುತ್ತಾರೆ : "ಮೊದಲನೆಯದು ನಮ್ಮ ಸುತ್ತಲೂ ಮುತ್ತಿರುವ ಶರೀರ. ನಮ್ಮ ಸುತ್ತಲೂ ಹಬ್ಬಿರುವ ಈ ಅಪಾರ ಬ್ರಹ್ಮಾಂಡ, ಈ ಅಪಾರ ಸೃಷ್ಟಿ ಎರಡನೆಯ ಸಂಸ್ಥೆ. ನಾವು ಅದರ ಅಂಶ, ನಾವು ಹುಟ್ಟಿ ಬಂದ ಸಮಾಜ, ನಮ್ಮ ಬದುಕಿಗೆ ನೆರಳು-ನೆರವು ಆದ ತಾಯಿ-ತಂದೆ, ಅಣ್ಣ-ತಂಗಿ ನೆರೆ ಹೊರೆಯವರು. ಇವರು ಮೂರನೇ ಸಂಸ್ಥೆ. ಈ

ಮೂರು ಸಂಸ್ಥೆಗಳನ್ನೂ ನಾವು ನಿತ್ಯವೂ ಉಪಯೋಗಿಸುತ್ತೇವೆ, ಸವೆಸುತ್ತೇವೆ. ಎಷ್ಟು ಸವೆಸುತ್ತೇವೆಯೋ ಅಷ್ಟನ್ನು ಮತ್ತೆ ತುಂಬಿಕೊಳ್ಳಲು ನಾವು ಸತತವೂ ಯತ್ನಿಸಬೇಕು; ಬಾಳನ್ನು ಸಫಲಗೊಳಿಸಬೇಕು. ಅಹಂಕಾರ ಬಿಟ್ಟು ಈ ಸಂಸ್ಥೆಗಳ ಬಗ್ಗೆ ನಮಗೆ ಜನ್ಮತಃ ಪ್ರಾಪ್ತವಾದ ಕರ್ತವ್ಯವನ್ನು ಮಾಡಬೇಕು, ನಿರ್ವಹಿಸಬೇಕು."

ಇಂತಹ ಸುಬದ್ಧ ಕಾರ್ಯಕ್ರಮದಿಂದ ನಮ್ಮ ಬಾಳು ಮುಕ್ತವೂ, ಪ್ರಸನ್ನವೂ ಆದೀತು. ಸರ್ವೋದಯಕ್ಕೆ ಪಥ ನಿರ್ಮಾಣವಾದೀತು. ಇದರ ಜತೆಗೆ ಇನ್ನೊಂದು ಅಂಶ ಎಲ್ಲದಕ್ಕೂ ಹಿಂದಿರಬೇಕು. ಅದು ತಾಯಿ ಬೇರಿನಂತೆ ಅದು ಗೀತಾ ಪ್ರವಚನದ ಆರಂಭದಲ್ಲಿ ಬಂದ ಆತ್ಮಜ್ಞಾನ; ಸತ್-ಅಸತ್ ವಿವೇಕ. ಆತ್ಮ ಅಮರ, ಅಖಂಡ. ದೇಹ ಕ್ಷುದ್ರ ಎಂಬುದು.

ನಮ್ಮದು ವಿಜ್ಞಾನಯುಗ, ಭೌತ ಸಮೃದ್ಧಿಯ ಯುಗ. ಇದರ ಪರಿಣಾಮ, ನಮಗೆ ಆತ್ಮಜ್ಞಾನದಲ್ಲಿ ನಂಬಿಕೆ ಸಡಿಲವಾಗುತ್ತಿದೆ. ಪ್ರತ್ಯಕ್ಷವೇ ಪ್ರಮಾಣ ಎಂಬ ಸ್ಥಿತಿ ನಮ್ಮದು. ವಸ್ತುಲಾಲಸೆ ಹೆಚ್ಚುತ್ತದೆ.

ಗೀತೆಯ ಬೋಧೆಯೆಲ್ಲ ವಸ್ತುಮೋಹ ನಾಶ. ಇದು ಆತ್ಮಜ್ಞಾನದಿಂದ ಮಾತ್ರ ಲಭ್ಯ. ವಿನೋಬಾ ಈ ಸಮಿಾಕರಣವನ್ನು ಘೋಷಿಸಿದ್ದಾರೆ.

"ವಿಜ್ಞಾನ + ಆತ್ಮಜ್ಞಾನ = ಸರ್ವೋದಯ. ವಿಜ್ಞಾನ ವಿಹಿತಜ್ಞಾನವಾಗಿ, ವಿಚಾರಯುತ ಜ್ಞಾನವಾಗಿ ಅಥವಾ ವಸ್ತುಗಳ ಅಂತರಂಗ ಹಾಗೂ ಬಹಿರಂಗ ಜ್ಞಾನವಾಗಿ ಪರಿಣಮಿಸಿದಲ್ಲಿ ಸರ್ವೋದಯ ನಮಗೆ, ಲೋಕಕ್ಕೆ ಕರಗತವಾಗಲು ಅಡ್ಡಿಯೇನು ? ಭಾರತ ಸರ್ವೋದಯಕ್ಕಾಗಿ ಶ್ರಮಿಸಲು ಗಾಂಧೀಜಿ, ವಿನೋಬಾ, ಜಯಪ್ರಕಾಶನಾರಾಯಣ ಇವರುಗಳ ಸ್ಫೂರ್ತಿಯುತ ನೇತೃತ್ವದ ಲಾಭ ನಮಗಿದೆ. ನಾವು ಕಣ್ತೆರೆದು, ಸಾಹಸದಿಂದ ಮುಂದಡಿ ಇಡಬೇಕು. ಗಾಂಧೀಜಿಯ ಸತ್ಯಾಗ್ರಹ ವಿನೋಬಾ ಅವರ ಸಮನ್ವಯ ಮತ್ತು ಸೌಮ್ಯಾತಿ ಸೌಮ್ಯ ಸತ್ಯಾಗ್ರಹ, ಜಯಪ್ರಕಾಶರ ಸಂಪೂರ್ಣ ಕ್ರಾಂತಿ ಇವುಗಳು ಉಜ್ವಲ ನಿದರ್ಶನಗಳಾಗಿ ನಮ್ಮ ಮುಂದಿದೆ.

ಈ ಭವ್ಯ ಕಾರ್ಯಕ್ಕೆ ಗೀತೆ ವಿಚಾರದ ಹಿನ್ನೆಲೆ ಒದಗಿಸಿದಂತೆ, ಗೀತಾ ಪ್ರವಚನವೂ ಸಮರ್ಥವಾಗಿ ಬೆಳಕನ್ನು ಚೆಲ್ಲಿ, ಭಾವ, ಬುದ್ಧಿ, ಮನಗಳನ್ನು ಉಜ್ವಲಗೊಳಿಸಲಾರದೆ ?

ಕ್ರಿಯೆಯ ಅಭಾವ ನಮ್ಮದು. ಗೀತಾತಾಯಿ ರಾಷ್ಟ್ರದ ಮಕ್ಕಳಿಗೆ ಚೇತನವೀಯಲಿ.

ಸರ್ವೋದಯ ಸಾಹಿತ್ಯ

			ರೂ. ಪೈ
ಗೀತಾ ಪ್ರವಚನ	— ವಿನೋಬಾ	...	5-00
ವಿನೋಬಾ : ಜೀವನ-ದರ್ಶನ	— ಸಂಪಾದಿತ	...	8-50
ನಿತ್ಯನೂತನ ಶಿಕ್ಷಣ	— ವಿನೋಬಾ	...	8-00
ಲೋಕ ನೀತಿ	,,	...	8-00
ಅಧ್ಯಾತ್ಮ ವಿಚಾರ	,,	...	12-00
ಮೂರನೆಯ ಶಕ್ತಿ-ಲೋಕಶಕ್ತಿ	,,	...	3-00
ಸ್ವರಾಜ್ಯ ಶಾಸ್ತ್ರ	,,	...	1-50
ಗ್ರಾಮ ಸ್ವರಾಜ್ಯ	,,	...	1-00
ನಾಮಮಾಲಾ	,,	...	1-00
ಜಯಪ್ರಕಾಶ್ ನಾರಾಯಣ		...	7-50
ಗ್ರಾಮರಾಜ್ಯ ಏಕೆ ?		...	2-00
ಸಂತ ವಿನೋಬಾ		...	1-00
ಕಸ್ತೂರಬಾ		...	1-00
ಸರ್ವರಿಗಾಗಿ ಸಂಪೂರ್ಣ ಕ್ರಾಂತಿ		...	1-00
ಸಂಪೂರ್ಣ ಕ್ರಾಂತಿಗಾಗಿ ಲೋಕ ಸಮಿತಿಗಳು		...	1-00
ಪ್ರಾರ್ಥನೆ, ಪದ್ಯಾವಳಿ ಇತ್ಯಾದಿ			

★

ಪ್ರತಿಗಳಿಗಾಗಿ ಬರೆಯಿರಿ :

ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ

ವಲ್ಲಭ ನಿಕೇತನ, ಕುಮಾರಾ ಪಾರ್ಕ್ (ಪೂರ್ವ)

ಬೆಂಗಳೂರು-560 001